

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119

Volume : 07 | Issue : 03 | Tuesday 03-09-2024 | E-mail : maruti.b.hosamani76@gmail.com | Page: 4 | Price : Rs. 1/-


## ಪ್ರತಿಭಾ ಕಾರಂಜಿಯಲ್ಲಿ ಕೋಡಿಹಳ್ಳಿಯ ಸ.ಹಿ.ಪ್ರಾ.ಶಾಲೆಯ ವಿದ್ಯಾರ್ಥಿಗಳು ಛದ್ಮವೇಷದಲ್ಲಿ ಎಲ್ಲರ ಮನಗೆದ್ದ: ಆರ್. ಭಾವನಾ ಮತ್ತು ಲಾಸ್ಯ

**ಸಿಹಿ – ಕಹಿ ಸುದ್ದಿ**



**ಚಳ್ಳಕೆರೆ :** ಚಳ್ಳಕೆರೆಯಲ್ಲಿ ಹೊಸದಾಗಿ ರಚನೆಯಾದ 'ಚಳ್ಳಕೆರೆ ಬಳಗ' ಮತ್ತು ಹುಣ್ಣಿಮೆ ಪ್ರಕಾಶನದ ವತಿಯಿಂದ ಕತೆಗಾರ ಎನ್.ಆರ್. ತಿಪ್ಪೇಸ್ವಾಮಿ ಅವರ ಮನೆ 'ಅವನಿ' ಮೇಲ್ಛಾವಣಿಯಲ್ಲಿ ಈ ಸುಂದರ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಶ್ರೀಯುತ ಶ್ರೀನಿವಾಸರಾಜು ದೊಡ್ಡೇರಿ ಅನುವಾದಿಸಿದ ಸಮಕಾಲೀನ ತೆಲುಗು ಕವಿತೆಗಳ ಓದು ಮತ್ತು ಚರ್ಚೆ ಅರ್ಥಪೂರ್ಣವಾಗಿತ್ತು. ಮದ್ದೂರಿ ನಾಗೇಶ್ ಬಾಬು, ಪ್ರೊ.ಚಲ್ಲಪಲ್ಲಿ ಸ್ವರೂಪರಾಣಿ, ರವಿಕುಮಾರ್ ನೂಕತೋಟಿ, ವಿಲ್ಸನ್ ಸುಧಾಕರ್, ಇಂಡಸ್ ಮಾರ್ಟಿನ್ ಅವರ ಕವಿತೆಗಳ ವಾಚಿಸಲಾಯಿತು.

ನಂತರ ಈ ಕವಿತೆಗಳ ಪ್ರಸ್ತುತತೆ, ಕವಿತೆಗಳ ಆಶಯ, ನುಡಿಗಟ್ಟುಗಳ ಬಳಕೆಯ ಬಗ್ಗೆ ಚರ್ಚಿಸಲಾಯಿತು.

ಗ್ರಾಮೀಣ ಸಾಹಿತ್ಯ ಪರಿಷತ್ ಕಟ್ಟುವ ಮೂಲಕ ಮೂರು ದಶಕದಿಂದಲೂ ಸಾಹಿತ್ಯಿಕ ಚಟುವಟಿಕೆಗಳನ್ನು ಮಾಡುತ್ತಾ ಬಂದಿರುವ ಹಿರಿಯ ಸಾಹಿತಿ ತಿಪ್ಪಣ್ಣ ಮರಿಕುಂಟೆ ಸರ್ ಭಾಗವಹಿಸಿ ಒಂದಷ್ಟು ಅರ್ಥಪೂರ್ಣ ಮಾತುಗಳನ್ನಾಡಿದರು, ಈ ತರಹದ ಸರಳವಾದ ಯಾವುದೇ ರೀತಿಯ ಶೂನ್ಯ ಬಂಡವಾಳದಲ್ಲಿ ಕಾರ್ಯಕ್ರಮಗಳು ಎಲ್ಲಾ ಕಡೆಗೂ ನಡೆಯಬೇಕು ಎಂದು ಸಲಹೆ ನೀಡಿದರು.

ಸಾಹಿತಿಗಳು ಮತ್ತು ಯುವ ಕವಯಿತ್ರಿ ಆದ ಶ್ರೀಮತಿ ಶಬ್ರೀನಾ ಮಹಮದ್ ಅಲಿ ರವರು ಮಾತನಾಡಿ ಎಲ್ಲ ಕವಿ ಮಿತ್ರರೂ ಸಮಾನ ಮನಸ್ಕರು ಒಂದೆಡೆ ಸೇರಿ ಹೀಗೆ ವಿವಿಧ ಸಾಹಿತ್ಯ ವಿಷಯಗಳ ಬಗೆಗಿನ ಅರ್ಥಪೂರ್ಣ ಚರ್ಚೆಗಳನ್ನು ನಮ್ಮ ಕನ್ನಡ ನಾಡು ನುಡಿ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದಂತೆ ಹೆಚ್ಚು ಹೆಚ್ಚು ಈ ರೀತಿಯ ಆರೋಗ್ಯಕರ ಚರ್ಚೆಗಳು ಮತ್ತು ವಿಚಾರ ಗೋಷ್ಠಿಗಳನ್ನು ಹಮ್ಮಿಕೊಳ್ಳುವುದರಿಂದ ಇತ್ತೀಚಿನ ಯುವ ಕವಿಗಳಲ್ಲಿ ಹುಮ್ಮಸ್ಸು ಹಾಗೂ ಸ್ಫೂರ್ತಿಯನ್ನು ತುಂಬುತ್ತವೆ ಎಂದು ಸಲಹೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಮೋದೂರು ತೇಜ, ಅಶೋಕ್ ಅಗಿಲ್, ವೇದಾಂತ ,ಅರುಣ್ ಜೋಳದ ಕೂಡ್ಲಿಗಿ, ನಿಸರ್ಗ ಗೋವಿಂದರಾಜ, ಜಭೀವುಲ್ಲಾ ಎಂ ಆಸದ್ ಮೊಳಕಾಲ್ಮೂರು, ಎಸ್. ರಾಜು ಸೂಲೇನಹಳ್ಳಿ ಪ್ರಕಾಶಕರು ತನುಶ್ರೀ ಪ್ರಕಾಶನ ಸೂಲೇನಹಳ್ಳಿ,ಕೋರ್ಲ ಕುಂಟೆ ತಿಪ್ಪೇಸ್ವಾಮಿ,ಶಿವಕುಮಾರ್,ರಂಗಸ್ವಾಮಿ,ಮಹಮದ್ ಅಲಿ ಎಂ.ಐ, ವಿಜಯಲಕ್ಷ್ಮಿ, ಮುಂತಾದ ಇಪ್ಪತ್ತಕ್ಕೂ ಹೆಚ್ಚು ಕವಿಗಳು ಮತ್ತು ಸಾಹಿತಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು ಎಲ್ಲರ ಸಹಕಾರ ದೊಂದಿಗೆ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನೆರವೇರಿತು.

**ವರದಿ:ಕೋಡಿಹಳ್ಳಿ.ಟಿ.ಶಿವಮೂರ್ತಿ. ಚಿತ್ರದುರ್ಗ.**

## ನರೇಗಲ್ ಪಟ್ಟಣ ಪಂಚಾಯಿತಿ ಬಿಜೆಪಿ ಬಂಡಾಯ ಅಭ್ಯರ್ಥಿಗಳಾದ ಫಕೀರಪ್ಪ ಮಳ್ಳಿ ಅಧ್ಯಕ್ಷ, ಉಪಾಧ್ಯಕ್ಷರಾಗಿ ಕುಮಾರಸ್ವಾಮಿ ಕೊರದಾನ ಮಠ ಆಯ್ಕೆ



**ನರೇಗಲ್ :** ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ನರೇಗಲ್ ಪಟ್ಟಣ ಪಂಚಾಯತಿ ಇಂದು ನಡೆದ ಎರಡನೇ ಅವಧಿಗೆ ಅಧ್ಯಕ್ಷರು ಉಪಾಧ್ಯಕ್ಷ ಚುನಾವಣೆಯಲ್ಲಿ ಎರಡು ಸಾಮಾನ್ಯ ಅಭ್ಯರ್ಥಿ ಮೀಸಲಾಗಿತ್ತು ಅದರಲ್ಲಿನಾಲ್ಕು ಜನ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು ಅದರಲ್ಲಿ 15 ನೇ. ವಾರ್ಡಿನ ಫಕೀರಪ್ಪ ಮಳಿ ಅವರು 17 ನೇ. ವಾರ್ಡಿನ ಕುಮಾರಸ್ವಾಮಿ ಕೊರದಾನ್ಮಠ ಮೂರನೇ ವಾರ್ಡಿನ ಮಲ್ಲನಗೌಡ ಬೊಮ್ಮನಗೌಡ 8 ನೇ. ವಾರ್ಡಿನ ಶ್ರೀಮತಿ ಹೊಸಮನಿ ಅವರು ನಾಮಪತ್ರ ಸಲ್ಲಿಸಿದರು ಅದರಲ್ಲಿ ಬಿಜೆಪಿ ಇಬ್ಬರು ಸದಸ್ಯರು ಸಂಖ್ಯಾ ಬಲದ ಕೊರತೆಯಿಂದ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯಿಂದ ಹಿಂದೆ ಸರಿದರು ಕಾಂಗ್ರೆಸ್ ಬೆಂಬಲಿತ ಸದಸ್ಯರಿಂದ ಅಧ್ಯಕ್ಷ ಉಪಾಧ್ಯಕ್ಷರಾಗಿ ಆಯ್ಕೆಯಾದರು ಒಟ್ಟು 17 ಜನ ಸದಸ್ಯರನ್ನು ಒಳ ಗೊಂಡಿದ್ದು ಅದರಲ್ಲಿ ಬಿಜೆಪಿ ಹದಿಮೂರು ಜನ ಕಾಂಗ್ರೆಸ್ಸಿನ ಮೂರು ಜನ ಇಬ್ಬರು ಪಕ್ಷೇತರ ಸದಸ್ಯರಿದ್ದು ಆರು ಜನ ಬಿಜೆಪಿ ಸದಸ್ಯರು ಒಬ್ಬರು ಪಕ್ಷೇತರ ಸದಸ್ಯರು ಕಾಂಗ್ರೆಸ್ಸಿಗೆ ಬೆಂಬಲ ತೆಗೆದು ಕೊಂಡು ಬಿಜೆಪಿ ಬಂಡಾಯ ಅಭ್ಯರ್ಥಿಗಳ ಅಧ್ಯಕ್ಷ ಉಪಾಧ್ಯಕ್ಷರಾಗಿ ಆಯ್ಕೆಯಾದ ಅಧ್ಯಕ್ಷ ಉಪಾಧ್ಯಕ್ಷರು ಹಾಗೂ ಸದಸ್ಯರಿಗೆ ಮತ ಕ್ಷೇತ್ರದ ಶಾಸಕರಾದ ಜಿ.ಎಸ್ ಪಾಟೀಲ್ ಅವರು ಆಗಮಿಸಿ ಪಟ್ಟಣ ಪಂಚಾಯತಿ ಅಭಿವೃದ್ಧಿಗೆ ಎಲ್ಲರೂ ಸಮಾನ ದೃಷ್ಟಿಯಿಂದ ಕೆಲಸ ಮಾಡಿ ಎಂದು ಮಾರ್ಗದರ್ಶನ ನೀಡಿ–ದರು ಅಧ್ಯಕ್ಷ ಉಪಾಧ್ಯಕ್ಷರಿಗೆ ಶುಭ ಹಾರೈಸಿ ಒಳ್ಳೆಯ ಕೆಲಸವನ್ನು ಜನರಿಗೆ ನೀಡಿ ಎಂದು ಮಾರ್ಗದರ್ಶನ ಮಾಡಿದರು ಚುನಾವಣೆ ಅಧಿಕಾರಿಯಾಗಿ ಗಜೇಂದ್ರಗಡ ತಾಲೂಕ ತಹಶೀಲ್ದಾರ ಕಿರಣ್ ಕುಮಾರ್ ಕುಲಕರ್ಣಿ ಕರ್ತವ್ಯ ನಿರ್ವಹಿಸಿದ ಪೊಲೀಸ್ ಸಿಬ್ಬಂದಿ ವರ್ಗದವರು ಶಾಂತಿ ರೀತಿಯಿಂದ ಚುನಾವಣೆ ಕಾರ್ಯವನ್ನು ನಡೆಸಿ ಕೊಟ್ಟರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಶಿವಾನಂದ.ಎಫ್. ಗೋಗೇರಿ.ತೋಟಗುಂಟಿ.ಗದಗ.**

## ಸುಖದ ಜೀವನ ಜಗದ ಬಾಳಿಗೆ ನೀನೇ ರೂವಾರಿ

ನಗು ಮುಖ ಜಗದ ಸಿರಿ
ಚಿಕ್ಕ ಕೆಲಸದ ಕ್ಷಣ ಖುಷಿ ಸವಿ
ಅನಾವಶ್ಯಕ ವಿಚಾರ ಬೇಡ
ಬೇರೆಯವರ ಅಭಿಪ್ರಾಯ ಕೇಳಿ
ನಮ್ಮ ತನದ ಗುರುತರ ವಿರಲಿ
ನಿರ್ಲಕ್ಷ್ಯ ಮಾಡವವರ ಅಲಕ್ಷ್ಯ ಮಾಡಿ ಜಂಭ ಅಹಂಕಾರದವರ ಮುಂದೆ ಮೌನವಹಿಸಿ
ಸ್ಪಂದಿಸದವರ ಮುಂದೆ ಜಗ ಜಟ್ಟಿಯಾಗಿ ಬಾಳಿ
ಮುಂದಾಲೋಚನೆ ಬೇಡ ಈ ಕ್ಷಣದ ಖುಷಿ ಪಡಿ
ಕೈಚಾಚುವದು ಬೇಡ ಶ್ರಮ
ದುಡಿಮೆಯಲಿ ಸ್ವಲ್ಪ ಹಂಚಿ
ಕನಿಷ್ಠ ಗರಿಷ್ಠ ಬಗ್ಗೆ ಸಣ್ಣತನದ ದಡ್ಡತನ ಬೇಡ ದೊಡ್ಡತನವಿರಲಿ
ಹೋಲಿಕೆ ಬೇಡ ಹೊಸತನ ಇರಲಿ
ಮೆಚ್ಚಿಸುವದು ಬೇಡ ಮನ ಮೆಚ್ಚುವಂತಿರಲಿ
ಸರ್ವರ ಜೋತೆ ನಗು ನಗುತಾ ಇರ್ರಿ
ಅನುಕ್ಷಣ ಅನುದಿನವೂ ಉತ್ಸಾಹ ಭರಿತ ವಿರಲಿ ಸುಖದ ಜೀವನ ಸಂದೇಶ ನಿನಗೆ ನೀನೇ ಮಾದರಿ ಆದರ್ಶ ಜೀವನ ಶೈಲಿ
ಜಗದ ಬಾಳಿಗೆ ನೀನೇ ರೂವಾರಿ.



–ದೇಶಂಸು
ಶ್ರೀ ಸುರೇಶ ಶಂಕ್ರೆಪ್ಪ ಅಂಗಡಿ
ಆರೋಗ್ಯ ನಿರೀಕ್ಷಣಾಧಿಕಾರಿ
ಬಾಗಲಕೋಟೆ

# ಶಿಕ್ಷಕರು ನೀಡುವ ಶಿಕ್ಷಣವೇ ದೃಢವಾದ ಆಸ್ತಿಯಾಗಿ ಉಳಿಯಲಿ

**ಸುತಗುಂಡರ:** ಶಿಕ್ಷಣವುಮನುಕುಲದಉದ್ಧಾರಕ್ಕೆ ಅವಶ್ಯಕ ಎನಿಸಿದೆ. ಶಿಕ್ಷಣವೇ ಶಕ್ತಿ ಎಂಬ ಮಾತು ಅದರ ಮೌಲ್ಯವನ್ನು ಎತ್ತಿ ಹಿಡಿದಿದೆ. ಮಕ್ಕಳಿಗಾಗಿ ಆಸ್ತಿ ಮಾಡಬೇಡಿ ಮಕ್ಕಳಿಗೆ ಶಿಕ್ಷಣ ನೀಡಿ ನಾಡಿಗೆ ಆಸ್ತಿಯಾಗಿ ಮಕ್ಕಳನ್ನು ಕೊಡಮಾಡಿ ಎಂಬ ಮೌಲ್ಯಯುತ ಮಾತು ಶಿಕ್ಷಣದ ಬಗ್ಗೆ ಪಾಲಕರು ವಹಿಸ ಬೇಕಾದ ಕರ್ತವ್ಯ ಪ್ರಜ್ಞೆಯನ್ನು ಜಾಗೃತ ಗೊಳಿಸುತ್ತದೆ. ಶಿಕ್ಷಣ ಎಂಬುದು ಹುಲಿಯ ಹಾಲಿದ್ದಂತೆ ಅದನ್ನು ಕುಡಿದವರು ಘರ್ಜಿಸಲೆ ಬೇಕೆಂಬ ಡಾ. ಬಾಬಾಸಾಹೇಬ ಅಂಬೇಡ್ಕರ ಅವರ ನುಡಿ ಶಿಕ್ಷಣಕ್ಕೆ ಇರುವ ನಿಜ ಶಕ್ತಿಯನ್ನು ಸಂಕೇತಿ ಕರಿಸುತ್ತದೆ.

ಕಾಣದ ದೇವರು ಇರಬಹುದು ನಿಜಾ ಆದರೆ ಆ ದೇವರ ರೂಪವೇ ಶಿಕ್ಷಣ. ಶಿ– ಶಿಶುವಿನಿಂದಲೇ ಆರಂಭ ಕ್ಷ ? ಕ್ಷಣ ಕ್ಷಣಕ್ಕೂ ವಿಜಯದ ಸಂ–ಕೇತ ಣ– ನವ ಯುಗಕ್ಕೆ ಸಾಕ್ಷಿಯಾಗಲಿದೆ ಶಿಕ್ಷಣ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲೂಕಿನ ಸುತಗುಂಡಾರದ ಕವಯಿತ್ರಿ ಕುಮಾರಿ. ಪ್ರತಿಭಾ. ಶೇಖಪ್ಪ. ಪೂಜಾರಿ ಅವರ ಕವನದ ಸಾಲುಗಳಲ್ಲಿ ದೇವರನ್ನು ಯಾರು ಕಂಡಿರುವುದಿಲ್ಲ ಆದರೆ ದೇವರ ರೂಪವೇ ಶಿಕ್ಷಣ ಎಂದು ತಿಳಿಸುತ್ತಾ ಶಿಶುವಿನಿಂದ ಆರಂಭವಾಗಿ, ಕ್ಷಣ ಕ್ಷಣಕ್ಕೂ ವಿಜಯದ ಸಂಕೇತವೆಂಬಂತೆ ಗೋಚರವಾಗಿ, ನವ ಯುಗಕ್ಕೆ ಶಿಕ್ಷಣ ಸಾಕ್ಷಿಯಾಗಲಿದೆ ಎಂಬ ಸಾಲುಗಳು ಶಿಕ್ಷಣದ ಮಹತ್ವವವನ್ನು ಕಾವ್ಯ ಉಕ್ತಿಗಳಲ್ಲಿ ನಮಗೆ ತಿಳಿಸಿ ಕೊಡುತ್ತದೆ. ಶಿಕ್ಷಣದ ಅನೇಕ ಆಯಾಮಗಳನ್ನು, ಮಜಲುಗಳನ್ನು ಅವಲೋಕಿಸುವ ಭಾಗವಾಗಿ ಶಿಕ್ಷಣ ಪ್ರತಿಯೊಬ್ಬರ ಜೀವನದಲ್ಲಿ ಕ್ಷಣ ಕ್ಷಣಕ್ಕೂ ವಿಜಯದ ಸಂಕೇತವಾಗಿ ಹೇಗೆ ಗೋಚರಿಸುತ್ತದೆ ಎಂಬ ಅಂಶಗಳನ್ನು ಈ ಲೇಖನ ಬರಹದ ಮೂಲಕ ತಿಳಿಸುವ ಸದಾಶಯವನ್ನು ಅನೇಕ ಚಿಂತನಾರ್ಹ ಅಂಶಗಳ ವಿಶ್ಲೇಷಣೆಯಲ್ಲಿ ಕಾಣುತ್ತೇವೆ.

ಶಿಕ್ಷಣ ವ್ಯಕ್ತಿಯ ಬದುಕಿಗೆ ದಾರಿ ದೀಪ : "ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ" ಎಂಬ ಬಸವಣ್ಣನವರ ವಚನ ಸಾರದ ಸಾಲುಗಳನ್ನು ಗಮನಿಸುವಾಗ ನಮ್ಮಲ್ಲಿನ ಅಜ್ಞಾನ, ಅಂಧಕಾರ ದೂರವಾಗ ಬೇಕಾದರೆ ಜ್ಞಾನ ಅವಶ್ಯಕ ಎನಿಸುತ್ತದೆ. ಆ ಜ್ಞಾನ ಸಿಗುವುದು ಶಿಕ್ಷಣ ದಿಂದ ಎಂಬುದು ಸತ್ಯದ ಮಾತು. ಚಾಣಕ್ಯ ಒಂದು ಕಡೆ ಹೇಳಿದ ಮಾತು ಹೀಗಿದೆ. "ಅಜ್ಞಾನ ಮತ್ತು ಅಶಿಸ್ತು ಮನುಷ್ಯನ ತೊಂದರಗೆ ಮುಖ್ಯ ಕಾರಣಗಳಾಗಿವೆ" ಮನುಷ್ಯ ತೊಂದರೆಗಳಿಂದ ಮುಕ್ತವಾಗ ಬೇಕಾದರೆ ಜ್ಞಾನ ಮತ್ತು ಶಿಸ್ತು ಅವಶ್ಯಕ ಎನ್ನುವುದನ್ನು ಇಲ್ಲಿ ಕಾಣುತ್ತೇವೆ. ಮನುಷ್ಯ ಸಂಕುಲದ ಬೆಳವಣಿಗೆಯನ್ನು ಗಮನಿಸುವಾಗ ಶಿಕ್ಷಣ ವಹಿಸಿದ ನಿರ್ಣಾಯಕ ಪಾತ್ರ ವೈವಿಧ್ಯಮಯವಾಗಿ ಗೋಚರವಾಗುತ್ತದೆ. ವ್ಯಕ್ತಿಯೊಬ್ಬನ ಸಾಧನೆಗಳು ಕಂಡು ಬರುವುದು ಆತ ಪಡೆದಿರುವ ಶಿಕ್ಷಣ, ಸಂಸ್ಕಾರಗಳನ್ನು ಆಧರಿಸಿರುತ್ತವೆ. ಶಿಕ್ಷಣ ಪಡೆದ ವ್ಯಕ್ತಿ ಸಮಾಜದಲ್ಲಿ ಶ್ರೇಷ್ಠ ಸ್ಥಾನದಲ್ಲಿ ಗುರುತಿಸಿ ಕೊಂಡಿರುತ್ತಾನೆ. ಒಬ್ಬ ವ್ಯಕ್ತಿಯ ಬದುಕಿಗೆ ಶಿಕ್ಷಣವು ದಾರಿ ದೀಪ, ಕೈ ದೀವಟಿಗೆ ಯಂತೆ ಕಂಡು ಬಂದು ಆತ ಸಮಾಜದ ಆಸ್ತಿಯಾಗಿ ಸಾಧಕ ವ್ಯಕ್ತಿಯಾಗಿ ಬೆಳಗಲು ಬೆಳೆಯಲು ಶಿಕ್ಷಣ ಹತ್ತು ಹಲವಾರು ಆಯಾಮಗಳಲ್ಲಿ ನಿರ್ಣಾಯಕ ಸ್ಥಾನ ವಹಿಸುತ್ತದೆ.

ಶಿಕ್ಷಣ ದಿಂದ ಉತ್ತುಂಗ ಶಿಖರ ತಲುಪಿದ ಮಹನೀಯರು : ಜಗತ್ತಿನ ಅನೇಕ ರಂಗಗಳಲ್ಲಿ ತಮ್ಮದೇ ಆದ ಸಾಧನೆ ತೋರಿದ ಮಹನೀಯರ ಬದುಕನ್ನು ಅವಲೋಕಿಸುವಾಗ ಅವರ ಬದುಕಿನಲ್ಲಿ ದೊರೆತ ಗುರುಗಳ ಪಾತ್ರ, ಶಿಕ್ಷಣದ ಮೇರು ಸ್ಥಾನ ನಿರ್ಣಾಯಕ ಎನಿಸಿದ್ದನ್ನು ಕಾಣುತ್ತೇವೆ. ಭಾರತವನ್ನಾಳಿದ ಸಾಮ್ರಾಟರು, ಶ್ರೇಷ್ಠ ದೊರೆಗಳು ಸ್ವತಃ ತಮ್ಮ ಜೀವನದ ಶಿಕ್ಷಣದ ಅನುಭವಗಳನ್ನು ಗುರುಗಳ ಕಲಿಸಿದ ಬದುಕಿನ ಪಾಠಗಳನ್ನು ಸ್ಮರಿಸಿದ್ದಾರೆ. ಅಶೋಕ, ಮಯೂರ ವರ್ಮ, ಇಮ್ಮಡಿ ಪುಲಕೇಶಿ, ವಿಷ್ಣುವರ್ಧನ, ಕೃಷ್ಣದೇವರಾಯ ಸೇರಿದಂತೆ ಬಹುತೇಕ ಅರಸರು ಅಂದಿನ ಶಾಸ್ತ್ರ, ಶಸ್ತ್ರ ಶಿಕ್ಷಣ ಬಲದಿಂದ ಸಾಧನೆಯ ಉತ್ತುಂಗ ಶಿಖರ ತಲುಪಿದ್ದನ್ನು ಕಾಣುತ್ತೇವೆ. ಅದೇ ರೀತಿ ಸಾಹಿತ್ಯ, ವಿಜ್ಞಾನ, ಕಲೆ, ರಾಜಕೀಯ, ತತ್ವಜ್ಞಾನ, ಧಾರ್ಮಿಕ ಕ್ಷೇತ್ರ ಮುಂತಾದ ವಲಯಗಳಲ್ಲಿನ ಸಾಕ್ರೇಟಿಸ್, ಪ್ಲೇಟೋ, ಶಂಕರಚಾರ್ಯರು, ಬಸವಣ್ಣನವರು, ರನ್ನ, ಪಂಪ, ಕುವೆಂಪು, ಬೇಂದ್ರೆ, ಸರ್ ಸಿ.ವಿ ರಾಮನ್, ಲಾಲ್ ಬಹದ್ದೂರ ಶಾಸ್ತ್ರಿ, ಸರ್ವಪಲ್ಲಿ ರಾಧಾಕೃಷ್ಣನ್, ಅಬ್ದುಲ್ ಕಲಾಂ, ಹೀಗೆ ಅನೇಕ ಸಾಧಕರು ಶಿಕ್ಷಣವೆಂಬ ಜ್ಞಾನ ಜ್ಯೋತಿಯ ಬೆಳಕಿನಲ್ಲಿ ತಮ್ಮ ಬದುಕನ್ನು ಉಜ್ವಲವಾಗಿಸಿ ಕೊಂಡು ಆದರ್ಶ ವ್ಯಕ್ತಿಗಳಾಗಿ ನಮ್ಮ ನಡುವಿನ ಮರೆಯಲಾಗದ ಮಾಣಿಕ್ಯಗಳಾಗಿ ಕಂಡು ಬರುತ್ತಾರೆ. ವ್ಯಕ್ತಿ, ದೇಶದ ಚರಿತ್ರೆ ಸ್ಮರಿಸುವಂತಹ ಕಾರ್ಯ ಮಾಡಿ ಸಾಧನೆಯ ಉತ್ತುಂಗ ಶಿಖರ ತಲುಪ ಬೇಕಾದರೆ ಶಿಕ್ಷಣ, ಶಿಕ್ಷಕರ ಪಾತ್ರ ನಿರ್ಧಾರಕ ಸ್ಥಾನ ಪಡೆದು ಕೊಂಡಿದೆ.


ಕಣ್ಣು ಇದ್ದರು ಕುರುಡು ರಾಗುವುದು ಬೇಡ : ಶಿಕ್ಷಣದ ಮಹತ್ವ ಮೌಲ್ಯವನ್ನು ಗುರುತಿಸುವಾಗ ಅದು ಮನುಷ್ಯನ ಶರೀರದ ಭಾಗಗಳಾದ ಜಗತ್ತನ್ನು ಕಾಣುವ ಕಣ್ಣುಗಳಷ್ಟು ಮಹತ್ವದ್ದು ಎಂದು ತಿಳಿಯುತ್ತೇವೆ. ಅನೇಕ ಹಿರಿಯರು ಅನುಭವಿಗಳು ಜ್ಞಾನಿಗಳು ಶಿಕ್ಷಣದ ನಿಜ ಮಹತ್ವವನ್ನು ಅರಿತವರಾಗಿದ್ದು; ಇಂದಿನ ಕಾಲ ಘಟ್ಟದಲ್ಲಿ ನಿಜವಾಗಿಯೂ ಕಣ್ಣು ಇರದವರು ಕುರುಡರಲ್ಲ ಯಾರೂ ಶಿಕ್ಷಣವನ್ನು ಪಡೆಯದವರು ಇರುತ್ತಾರೆ–ಯೋ ಅವರೇ ನಿಜವಾದ ಕುರುಡರು ಅವರಿಗೆ ಅಜ್ಞಾನದ ಅಂಧಕಾರ ಇರುತ್ತದೆ ಎನ್ನುತ್ತಾರೆ. ಮನುಷ್ಯ ಸಂಕುಲಕ್ಕೆ ಶಿಕ್ಷಣದ ಚಿಂತನೆಗಳು ಅನೇಕ ಅಭಿವೃದ್ಧಿ ಪ್ರಗತಿಗೆ ಕಾರಣ ಎನಿಸಿವೆ. ಮಾನವರು ಅನೇಕ ಅಚ್ಚರಿಗಳನ್ನು, ಸಾಧನೆ ಸಿದ್ದಿಗಳನ್ನು ಅಪರೂಪದ ಕಾರ್ಯಗಳನ್ನು



ಸಾಧ್ಯ ಮಾಡಿದ್ದು ಶಿಕ್ಷಣವೆಂಬ ಶ್ರೇಷ್ಠ ವಿಚಾರ ಧಾರೆಯಿಂದ ಎಂಬುದನ್ನು ನಾವು ಮನವರಿಕೆ ಮಾಡಿಕೊಂಡು ಭವಿಷ್ಯದ ಜನಾಂಗಕ್ಕೆ ಶಿಕ್ಷಣದ ನಿಜ ಮೌಲ್ಯವನ್ನು ಪರಿಚಯಿಸ ಬೇಕಾದ ಅನಿವಾರ್ಯತೆ ಇರಲಾಗಿದೆ. ನಮ್ಮ ಸುತ್ತಲಿನ ಅನೇಕರು ಶಿಕ್ಷಣ ದಿಂದ ವಂಚಿತರಾಗುತ್ತಿರುತ್ತಾರೆ; ಅಂತಹವರಿಗೆ ನೀವು ಕಣ್ಣು ಇದ್ದವರು ಕುರುಡರಾಗುವುದು ಬೇಡ ಶಿಕ್ಷಣ ಪಡೆದವರು ಮಾತ್ರ ಜ್ಞಾನದ ಬೆಳಕಿನಲ್ಲಿ ಯಶಸ್ಸನ್ನು ಕಾಣುತ್ತಾರೆ ಎಂಬುದನ್ನು ಮನವರಿಕೆ ಮಾಡುವುದು ಎಲ್ಲರ ಆದ್ಯ ಕರ್ತವ್ಯ ವಾಗಬೇಕಿದೆ.

ಶಿಕ್ಷಣವೇ ದೃಢವಾದ ಆಸ್ತಿಯಾಗಿ ಉಳಿಯಲಿ : ಶಿಕ್ಷಣವನ್ನು ಅನೇಕ ಪದ ಪುಂಜಗಳಿಂದ ವರ್ಣಿಸಿರುವಂತೆ ಅದನ್ನು ದೃಢವಾದ ಆಸ್ತಿ ಎಂದು ಕರೆದಿದ್ದಾರೆ. ಇಂದಿಗೂ ಬಲ್ಲವರು ಹೇಳಿದ ಮಾತು ನಿಮ್ಮ ಮಕ್ಕಳಿಗಾಗಿ ಹೊಲ, ಮನೆ, ಬಂಗಾರ, ನಿವೇಶನ, ಹೀಗೆ ಮುಂತಾದ ಆಸ್ತಿಗಳನ್ನು ಮಾಡದೇ ಮಕ್ಕಳನ್ನೆ ನಾಡಿನ ಆಸ್ತಿಯಾಗಿ ಮಾಡಿರಿ ಎಂಬ ಮಾತಿನ ಗಾಂಭೀರ್ಯತೆಯನ್ನು ಎಲ್ಲಾ ಪಾಲಕರು ಅರಿತುಕೊಳ್ಳಬೇಕು. ಮಕ್ಕಳಿಗಾಗಿ ಆಸ್ತಿಗಳಿಸಿದರೆ ಅವರು ಐಷಾರಾಮಿ ಜೀವನಕ್ಕೆ , ಆಡಂಬರದ ಬದುಕಿಗೆ, ಸಿರಿತನದ ದರ್ಪಕ್ಕೆ ಒಳಗಾಗುವ ಸಾಧ್ಯತೆ ಇರುತ್ತದೆ. ಇಲ್ಲಿ ಪಾಲಕರು ಮಕ್ಕಳಿಗಾಗಿ ಯಾವುದೇ ಆಸ್ತಿಯನ್ನು ಮಾಡುವ ಗೋಜಿಗೆ ಹೋಗಬಾರದು ಅವರಿಗೆ ಬೌದ್ಧಿಕ ಶಿಕ್ಷಣವನ್ನು, ತಾಂತ್ರಿಕ ಶಿಕ್ಷಣವನ್ನು, ವೈಚಾರಿಕ ನೆಲೆಯ ಶಿಕ್ಷಣವನ್ನು, ವೈಜ್ಞಾನಿಕ ಮನೋಭವಾದ ಶಿಕ್ಷಣವನ್ನು ನೀಡಿದರೆ ಶಿಕ್ಷಣವು ಒಂದು ದೃಢವಾದ ಆಸ್ತಿ ಎಂಬಂತೆ ಗೋಚರವಾಗುತ್ತದೆ. ದೇಶದ ಅಭಿವೃದ್ಧಿಗಾಗಿ ಶಿಕ್ಷಕರು ನೀಡುವ ಶಿಕ್ಷಣವೇ ದೃಢವಾದ ಆಸ್ತಿಯಾಗಿ ಉಳಿಯ ಬೇಕಾಗಿದೆ. ಶಿಕ್ಷಣವಂತ ಮಕ್ಕಳೆ ನಿಜವಾದ ಆಸ್ತಿ ಎಂಬ ಭಾವನೆ ನಮ್ಮ ನೆಲದ ಎಲ್ಲಾ ಜನರಲ್ಲಿ ಮೂಡಿದಾಗ ಶಿಕ್ಷಣ ಸೌಗಂಧದ ಪರಿಮಳ ಎಲ್ಲಾ ಕ್ಷೇತ್ರಗಳಲ್ಲಿ ಹರಡುತ್ತದೆ.

ಶಿಕ್ಷಣ ಗುರುವಿನಿಂದ ಪಡೆದ ಭಿಕ್ಷೆ, ಮೌಲ್ಯಗಳನ್ನು ತುಂಬುವ ದೀಕ್ಷೆ : ಶಿಕ್ಷಣದ ಮಹತ್ವ ಅರಿಯುವಾಗ ಗುರುವಿನ ಶ್ರೇಷ್ಠ ಸ್ಥಾನದ ಅನೇಕ ಅಂಶಗಳು ಕಂಡು ಬರುತ್ತವೆ. ಗುರು ಶಿಷ್ಯರ ಅವಿನಾಭಾವ ಸಂಬಂಧವನ್ನು ನಾವು




ಭಾರತದ ಸನ್ನಿವೇಶದಲ್ಲಿ ಪುರಾಣ, ಕಾವ್ಯಗಳ ಕಾಲದಿಂದ ಮೊದಲ್ಗೊಂಡು ಆಧುನಿಕ ಕಾಲದ ಅನೇಕ ಗುರು ಶ್ರೇಷ್ಠರ ಶಿಷ್ಯ ಸಾಧಕರ ಜೀವನ ಸಾಧನೆಗಳಲ್ಲಿ ಕಾಣುತ್ತೇವೆ. ಹಿಂದೆ ತಮ್ಮ ಮಕ್ಕಳನ್ನು 15–16 ವರ್ಷಗಳ ತನಕ ಗುರುಕುಲದಲ್ಲಿ ಇಟ್ಟು ಕಲಿಸುವ ಪರಂಪರೆ ಇತ್ತು. ಅಂದು ಗುರುಗಳು ಶಿಷ್ಯರು ಮನೆಗೆ ಹೊರಡುವ ಕೊನೆಯ ವರ್ಷದಲ್ಲಿ ಹೇಳುವ ಮಾತೊಂದು ಹೀಗಿರುತ್ತಿತ್ತಂತೆ 'ನಾನು ಕಲಿಸಿದ್ದರಲ್ಲಿ ಯಾವುದನ್ನಾದರು ಮರೆತು ಬಿಡು ಪರವಾಗಿಲ್ಲ ಆದರೆ ಸತ್ಯಂ ವದ, ಧರ್ಮಂ ಚರ, ಮಾತೃ ದೇವೋಭವ, ಪಿತೃದೇವೋಭವ, ಆಚಾರ್ಯ ದೇವೋಭವ, ಅತಿಥಿ ದೇವೋಭವ' ಎಂಬುದನ್ನು ನೆನೆಪಿಟ್ಟುಕೋ. ನಿನಗೆ ಜೀವನ ದರ್ಶನ ಆಗುತ್ತದೆ ಎಂದು ಹೇಳುತ್ತಿದ್ದರು. ಕರುಳ ಬಳ್ಳಿಯ ಸಂಬಂಧಕ್ಕಿಂತಲೂ ಮೀಗಿಲಾಗಿ ಗುರುಗಳು ಮಕ್ಕಳಿಗೆ ಕಲಿಸುವ ಅಕ್ಷರ ಅರಿವು, ಜ್ಞಾನ ಸಂಸ್ಕಾರಗಳು ಅವರಿಗೆ ಗುರುಗಳು ನೀಡುವ ಶ್ರೇಷ್ಠ ಭಿಕ್ಷೆ ಎನಿಸಿ ಅದರಿಂದ ತುಂಬುವ ಮೌಲ್ಯಗಳು ಒಬ್ಬ ವ್ಯಕ್ತಿಗೆ ಕೊಡ ಮಾಡುವ ಶ್ರೇಷ್ಠ ದೀಕ್ಷೆ ಎನಿಸಿವೆ. ಅಂತೆಯೇ ಇಂದಿಗೂ ನಮ್ಮ ನೆಲದಲ್ಲಿ ಗುರುಗಳನ್ನು ದೈವತ್ವದ ಸ್ಥಾನದಲ್ಲಿ ಕಂಡು ಪೂಜಿಸಿ ಆರಾಧಿಸುತ್ತಾರೆ. ಭಾರತದ ಪವಿತ್ರ ನೆಲ ಗುರು–ಶಿಷ್ಯ ಪರಂಪರೆಯ ನಡುವೆ ಸೃಷ್ಟಿಸಿ ಕೊಂಡು ಕಾಲಕಾಲಕ್ಕೆ ಸೃಜಿಸಿ ಕೊಂಡು ಬಂದ ಮೌಲ್ಯಗಳು ನಿಜಕ್ಕೂ ಅಭಿನಂಧನಾರ್ಹ ಎನಿಸಿವೆ. ಹರ ಮುನಿದರು ಗುರು ಕಾಯುವನು ಎಂಬ ನುಡಿ ಗುರುವಿನ ಶ್ರೇ?ಷ್ಠತೆಗೆ ಸಾಕ್ಷಿ ಎನಿಸಿದ್ದು; ಶಿಷ್ಯ ಪರಂಪರೆ ಶಿಕ್ಷಣ ಪಡೆಯುವ ಹಾದಿಯಲ್ಲಿ ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬ ತತ್ವ ಚಿಂತನೆಯ ಅರಿವಿನ ಹಾದಿಯಲ್ಲಿ ಸಾಗುತ್ತಾ ಬಂದಿರುವುದು ಗುರುವಿನಿಂದ ಪಡೆಯುವ ಭಿಕ್ಷೆ– ದೀಕ್ಷೆಗಳ ಮೌಲ್ಯವನ್ನು ಎತ್ತರ ಮಟ್ಟಕ್ಕೆ ತಲುಪಿಸಿವೆ.

ಕತ್ತಲೆಯ ಕಳೆಯದಿದ್ದರೆ ದೀಪವ ಹಚ್ಚಿ ಫಲವೇನು : ಶಿಕ್ಷಣದ ಘನ ಉದ್ದೇಶ ಮನುಷ್ಯರ ಅಜ್ಞಾನ ಅಂಧಕಾರ ಕಳೆಯ ಬೇಕಿದೆ ಈ ದಿಸೆಯಲ್ಲಿ ಒಂದಷ್ಟು ಅಂಶಗಳನ್ನು ಗಮನಿಸುವಾಗ ಸರ್ವಜ್ಞ ಕವಿಯ ನುಡಿಗಳು ಇಂತಿವೆ.

ರಸಿಕನಾಡಿದ ಮಾತು ಶಶಿ ಉದಿಸಿ ಬಂದಂತೆ
ರಸಿಕನಲ್ಲದವನ ಬರಿ ಮಾತು ಕಿವಿಯೊಳು
ಕೂರ್ದೆಸೆಯ ಬಡಿದಂತೆ ಸರ್ವಜ್ಞ

ಇಂದು ಶಿಕ್ಷಣದ ವ್ಯಾಪ್ತಿ ಹರವು ವಿಸ್ತಾರವನ್ನು ಪಡೆದು ಕೊಂಡಿದೆ. ನಮ್ಮ ನಡೆ, ನುಡಿ ಹೇಗಿರಬೇಕೆಂಬುದನ್ನು ಶಿಕ್ಷಣದ ಅನೇಕ ಹಂತಗಳು ನಿರ್ಧರಿಸುತ್ತಾ ಬಂದಿರುತ್ತವೆ. ಅಂತೆಯೇ ಒಬ್ಬ ಉತ್ತಮ ಮಾತುಗಾರ ರೂಪು ಗೊಳ್ಳುವಲ್ಲಿ ಆತ ಉತ್ತಮ ಓದುಗಾರ ನಾಗಿರಬೇಕು ಎಂಬ ಸಂಗತಿಯು ಒಪ್ಪಿತವಾಗಿದ್ದು; ಹಾ.ಮಾ ನಾಯಕರವರು ಅಭಿಪ್ರಾಯ ಪಡಯವಂತೆ "ನಿಜವಾದ ಓದುಗಾರಿ–ಕೆಯು ಮನುಷ್ಯನನ್ನು ವಜ್ರವನ್ನಾಗಿಸುತ್ತದೆ. ಬೆಳಕು ಅಲ್ಲಿ ಪ್ರತಿ ಫಲಿಸುತ್ತದೆ." ಈ ದಿಸೆಯಲ್ಲಿ ಓದಿನ ಮಹತ್ವ ನಮಗೆ ತಿಳಿಯುವದು ಶಿಕ್ಷಣದಿಂದಲೆ ಎಂಬುದನ್ನು ಅರಿತು ಓದು ಬರಹದ ಕಡೆಗೆ ಎಲ್ಲರೂ ಗಮನ ಹರಿಸಬೇಕಿದೆ. ಅಕ್ಕ ಮಹಾದೇವಿಯ ವಚನೋಕ್ತಿಯ ನುಡಿ " ಕತ್ತಲೆಯ ಕಳೆಯದಿದ್ದರೆ ದೀಪವ ಹಚ್ಚಿ ಫಲವೇನು" ನಾವು ಕಲಿಯುವ ಶಿಕ್ಷಣ ನಮ್ಮ ನೆಲದ ಅಜ್ಞಾನ ಅಂಧಕಾರ, ಮೌಢ್ಯತೆಗಳನ್ನು ಕಳೆಯ ಬೇಕಿದೆ.

ಅವ್ವನ ಕರುಳು, ಕೊರಳು, ಬೆರಳು : ದಿನಾಂಕ 13–08–2024 ರಂದು ಬಾಗಲಕೋಟೆ ಜಿಲ್ಲೆಯ ಬೇವೂರಿನ ಶ್ರೀ ಪರಪ್ಪ ಸಂಗಪ್ಪ ಸಜ್ಜನ ಕಲಾ ಮಹಾವಿದ್ಯಾಲಯದ ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿಗಳ ಬಿಳ್ಕೊಡುಗೆ ಹಾಗೂ ಸಮಾರೋಪ ಸಮಾರಂಭದ ಮುಖ್ಯ ಅತಿ–ಥಿಯಾಗಿ ಭಾಗವಹಿಸಿದ ನಮ್ಮ ಭಾಗದ ಜನಪದ ವಿದ್ವಾಂಸರು, ಗಾಯಕರು ಆದ ಶ್ರೀಕಾಂತ ಕೆ–ಂದೂಳಿ ಅವರು ತಮ್ಮ ಉಪನ್ಯಾಸದಲ್ಲಿ ತಿಳಿಸಿದ ಸಾಂದರ್ಭಿಕ ಮಾತು ಇಂತಿದೆ. ನಮ್ಮ ನೆಲದ ಹೆಣ್ಣು ಮಕ್ಕಳಿಗೆ ಯಾವ ವಿಶ್ವ ವಿದ್ಯಾಲಯ, ಕಾಲೇಜುಗಳು ರೊಟ್ಟಿ ಮಾಡುವುದನ್ನು ಕಲಿಸಿಲ್ಲ ಅನಕ್ಷರಸ್ಥರಾದ ನಮ್ಮ ಅವ್ವಂದಿರು ತಮ್ಮ ಮಕ್ಕಳಿಗೆ ತಮ್ಮ ಕರುಳು, ಕೊರಳು, ಬೆರಳು, ಒಂದಾಗಿಸಿ ಕೊಂಡು ಸಂಸ್ಕಾರ ಬಲದಿಂದ ಅವರಿಗೆ ಹದವಾಗಿ ರೊಟ್ಟಿ ಮಾಡುವುದನ್ನು ಕಲಿಸಿದ್ದಾರೆ. ಅವ್ವನ ಅಡುಗೆ ಮನೆಯೇ ಹೆಣ್ಣು ಮಕ್ಕಳಿಗೆ ವಿಶ್ವವಿದ್ಯಾಲಯ ಎಂದು ಹೇಳಿದಾಗ ತುಂಬಿದ ಸಭೆ ಕರತಾಡನ ಮಾಡಿ ಅಪರೂಪದ ನುಡಿ ಸಾಲುಗಳಿಗೆ ಅಭಿನಂಧಿಸಲಾಯಿತು. ಇಂದಿನ ಆಧುನಿಕ ಕಾಲಘಟ್ಟದಲ್ಲಿ ನಾವೂ ಸಹ ನೆಲ ಮೂಲ ಸಂಸ್ಕೃತಿಯತ್ತ ಸಾಗಿ ತಂದೆ ತಾಯಂದಿರು ಕಲಿಸುವ ಸಂಸ್ಕಾರ ಶಿಕ್ಷಣದ ನಿಜ ಮೌಲ್ಯಗಳನ್ನು ಅರಿತು ಮನುಷ್ಯ ಸಂಬಂಧಗಳನ್ನು ಗಟ್ಟಿ ಗೊಳಿಸಬೇಕಾದ ಅವಶ್ಯಕತೆ ಇರಲಾಗಿದೆ.

ಮಹಾತ್ಮ ಗಾಂಧಿಜಿಯವರ "ವಿದ್ಯಾರ್ಥಿಯಲ್ಲಿರುವ ಶಕ್ತಿಯ ಪರಿ ಪೂರ್ಣತೆಯನ್ನು ಹೊರ ಗೆಳೆಯುವದೇ ಶಿಕ್ಷಣ ಸಾರ ಸರ್ವಸ್ವ" ಎಂಬ ನುಡಿಯನ್ನು ಗಮನಿಸುವಾಗ ಅವರು ಪ್ರತಿಪಾದಿಸಿದ ಸರ್ವೋದಯ ಶಿಕ್ಷಣದ ಚಿಂತನೆಗಳು ನಮಗೆ ಬೆಳಕಾಗ ಬೇಕಿವೆ. ಸಂಸ್ಕಾರ ನೀಡಿ ಮನುಷ್ಯ ಸಮುದಾಯವನ್ನು ಸನ್ಮಾರ್ಗದತ್ತ ಒಯ್ಯುವ ಶಿಕ್ಷಣ ಡಾ. ರಾಧಾಕೃಷ್ಣನ ಅವರು ಹೇಳಿರುವಂತೆ "ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಪ್ರಗತಿಗೆ ಇಂಬು ಕೊಡುವ ಶಿಕ್ಷಣವೇ ನಿಜವಾದ ಪರಿಪೂರ್ಣ ಶಿಕ್ಷಣ" ಎಂಬಂತೆ ಶಿಕ್ಷಣದ ನೈಜ ಬೆಲೆ ಮೌಲ್ಯ ಅರಿತು ನಾವೆಲ್ಲರೂ ಸಾಗಬೇಕಿದೆ. ಅರಿಸ್ಟಾಟಲರು ಹೇಳಿದಂತೆ " ಶಿಕ್ಷಣ ಸಮೃದ್ಧ ಸ್ಥಿತಿಯಲ್ಲಿದ್ದಾಗ ಆಭರಣ ಇದ್ದಂತೆ, ಆಪತ್ತಿನಲ್ಲಿ ಆಶ್ರಯ ತಾಣದಂತೆ" ಎಂಬ ಮಾತು ಜ್ಞಾನ ದೀವಿಗೆಯಾಗಿ ಬೆಳಗುವ ಆಪತ್ತಿನಲ್ಲಿ ಸಂಸ್ಕಾರ ಬಲದಿಂದ ಕಾಪಾಡುವ ಚೇತನ ಶಕ್ತಿ ಎನಿಸುವಂತಹದ್ದಾಗಿದೆ.

ಇಂದು ಶಿಕ್ಷಣ ಕ್ಷೇತ್ರಕ್ಕೆ ವಚನ ವಾಙ್ಮಯದ ಸರಳ ಸುಂದರ ವೈಚಾರಿಕ ನುಡಿಗಳನ್ನು ಹತ್ತು ಹಲವಾರು ಆಯಾಮಗಳಲ್ಲಿ ಪರಿಚಯಿಸಿ ವಚನಗಳ ಮೂಲಕ ನಾಡಿನ ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡುವದು ಅವಶ್ಯ ಎಂದು ತಿಳಿಯಬೇಕಿದೆ. ವಿಶ್ವ ಗುರು ಬಸವಣ್ಣನವರ ವಚನದ ಸಾಲುಗಳನ್ನು ಗಮನಿಸುವಾಗ ಉತ್ಕೃಷ್ಟ ವಿಚಾರ ಧಾರೆಗಳನ್ನು ಗುರುತಿಸುವಾಗ ಈ ವಚನ ವಿಶಿಷ್ಟಪೂರ್ಣವಾಗಿ ಕಂಡು ಬರುತ್ತದೆ.

ದೇವಲೋಕ, ಮರ್ತ್ಯ ಲೋಕವೆಂಬುದು
ಬೇರಿಲ್ಲ ಕಾಣಿರೋ
ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯ ಲೋಕ ಆಚಾರವೇ ಸ್ವರ್ಗ
! ಅನಾಚರವೇ ನರಕ !
ಕೂಡಲ ಸಂಗಮದೇವಾ ನೀವೆ ಪ್ರಮಾಣ

ಬಸವಣ್ಣನವರ ಮತ್ತೊಂದು ವಚನದ ಸಾಲು "ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ" ಇಲ್ಲಿಯೂ ಕೂಡಾ ನಾವು ಶೈಕ್ಷಣಿಕ ಆಯಾಮದ ಜ್ಞಾನದ ಮೌಲ್ಯವನ್ನು ಗುರುತಿಸುತ್ತೇವೆ. ಕಾಲ ಬದಲಾಗಿದೆ ಜನರ ಮನಸ್ಥಿತಿಗಳು ಬದಲಾಗಿವೆ ಇಂದು ವಿಜಯವೆಂದರೆ ಯುದ್ಧಗಳನ್ನು ಗೆಲ್ಲುವುದು ಅಲ್ಲ, ನಮ್ಮೊಳಗಿನ ಅಜ್ಞಾನ, ಅಂಧಕಾರ, ಅಹಂಗಳನ್ನು, ಅಲ್ಪಮತಿಯ ನಡೆಗಳನ್ನು ಗೆದ್ದು ಸಮಾಜದಲ್ಲಿ ಆದರ್ಶ ಪ್ರಾಯ ಎನಿಸಬೇಕಿದೆ. ಆ ವಿಜಯದ ಸಲುವಾಗಿ ನಿರಂತರ ಪ್ರಯತ್ನ ಪ್ರಾಮಾಣಿಕ ಕಾರ್ಯಗಳು ಜರುಗಬೇಕಿವೆ. ಇಲ್ಲಿ ಕ್ಷಣ ಕ್ಷಣಕ್ಕೂ ವಿಜಯದ ಸಂಕೇತವಾಗಿ ಶಿಕ್ಷಣ ಕಂಡು ಬಂದು ಶಿಕ್ಷಣ ಸಂಸ್ಕೃತಿಯ ವೈಭವ ನಂದಾ ದೀವಿಗೆಯಾಗಿ ಬೆಳಗಲಿ ಎಂಬುದು ಲೇಖನದ ಸದಾಶಯವಾಗಿದೆ.

***

**–ಡಾ. ಆದಪ್ಪ ಮ.ಗೊರಚಿಕ್ಕನವರ**
**(ಕೂಡಲಸಂಗಮ)**
**ಇತಿಹಾಸ ಉಪನ್ಯಾಸಕರು**
**ಪಿ.ಎಸ್.ಎಸ್. ಕಾಲೇಜು ಬೇವೂರ**
**ಬಾಗಲಕೋಟೆ ಜಿಲ್ಲೆ**
**ದೂ ಸಂ: 9482819608**

# ಸಚಿವರ ವರ್ತನೆಗೆ ಬೇಸತ್ತು ರಾಜೀನಾಮೆ: ಧರೆಪ್ಪ ಸಾಂಗ್ಲೀಕರ



**ಮಹಾಲಿಂಗಪುರ** : ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಸಚಿವರಾದ ನಂತರ ಆರ್.ಬಿ.ತಿಮ್ಮಾಪೂರ ಅವರ ಸರ್ವಾಧಿಕಾರಿ ಧೋರಣೆ ಹಾಗೂ ದುವರ್ತನೆಯಿಂದ ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ, ಮುಖಂಡರಿಗೆ ತುಂಬಾ ಅನ್ಯಾಯವಾಗಿದೆ. ಇದರಿಂದಾಗಿ ಜನಸಾಮಾನ್ಯರ ಆಶೋತ್ತರಗಳಿಗೆ ಸ್ಪಂದಿಸಲಾಗದಂತಹ ಸ್ಥಿತಿ ನಿರ್ಮಾಣವಾಗಿದೆ. ಸಚಿವರ ವರ್ತನೆಗೆಬೇಸತ್ತುಮುಧೋಳಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದು ಧರೆಪ್ಪ ಸಿದ್ದಪ್ಪ ಸಾಂಗಲಿಕರ ರಾಜ್ಯ ಪ್ರದೇಶ ಕಾಂಗ್ರೆಸ್ ಕಮೀಟಿ ಅಧ್ಯಕ್ಷ ಡಿ.ಕೆ.ಶಿವಕುಮಾರ ಅವರಿಗೆ ರಾಜೀನಾಮೆ ಪತ್ರವನ್ನು ಕಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟನೆ ಹೊರಡಿಸಿರುವ ಅವರು ಮುಧೋಳ ಮಿಸಲು ಮತಕ್ಷೇತ್ರದಲ್ಲಿ ಕಳೆದ 20 ವರ್ಷಗಳಿಂದ ಕಾಂಗ್ರೆಸ ಪಕ್ಷದ ಅಭ್ಯರ್ಥಿಯ ಸತತ ಸೋಲಿನನಂತರ2023ನೇಸಾಲಿನಚುನಾವಣೆಯಲ್ಲಿ ಗೆಲುವು ಸಾಧಿಸಲಿಕ್ಕೆ ನಾನು ಪಕ್ಷದ ಅಭ್ಯರ್ಥಿಯಾದ ಆರ್.ಬಿ.ತಿಮ್ಮಾಪೂರ ಗೆಲುವಿಗಾಗಿ ಶ್ರಮಿಸಿದ್ದೇನೆ.

15-10-2021 ರಿಂದ ಮುಧೋಳ ಬ್ಲಾಕ್ ಕಾಂಗ್ರೆಸ ಅಧ್ಯಕ್ಷನಾಗಿ ಪಕ್ಷದ ಹಿರಿಯರು, ಕಾರ್ಯಕರ್ತರು ಪದಾಧಿಕಾರಿಗಳೊಂದಿಗೆ, ಅಭ್ಯರ್ಥಿ ಯ ಗೆಲುವಿಗಾಗಿ ಪ್ರಾಮಾಣಿಕ ಕಾರ್ಯಕರ್ತನಾಗಿ ನನ್ನ ಕರ್ತವ್ಯ ಮಾಡಿದ್ದೇನೆ. ಸಚಿವರಾದ ನಂತರ ತಿಮ್ಮಾಪೂರಅವರುಜನಸಾಮಾನ್ಯರ ಆಶೋತರ ಗಳಿಗೆ ಸ್ಪಂಧಿಸಲಾಗದೆ ಪಕ್ಷದ ಹೆಸರಿಗೆ ಕಳಂಕ ಬರುವ ಹಾಗೆ ನಡಿದುಕೊಳ್ಳುತ್ತಿದ್ದಾರೆ. ಅಧಿಕಾರವೆಂಬುದು ಕೇವಲ ತಮ್ಮ ಮನೆಯ ಸ್ವತ್ತೆಂದು ತಿಳಿದು ಅವರ ಕುಟುಂಬ ಸದಸ್ಯರೆಲ್ಲರು ನಡೆದುಕೊಳ್ಳುತ್ತಿದ್ದಾರೆ.

ಇವರ ವರ್ತನೆ ಕಂಡು ಬೇಸತ್ತು ಮತದಾರರು ಕಳೆದ ಲೋಕಸಬಾ ಚುನಾವಣೆಯಲ್ಲಿ ಮುಧೋಳ ಮತಕ್ಷೇತ್ರದಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿಗೆ ಜಿಲ್ಲೆಯಲ್ಲಿಯೇ ಅತಿ ಹೆಚ್ಚಿನ ಮತಗಳ ಅಂತರ ನೀಡಿರುವುದು ಇವರ ಆಡಳಿತ ವೈಖರಿಗೆ ಆದ ಪರಿಣಾಮವಾಗಿದೆ.

ಪಕ್ಷದ ಅಭ್ಯರ್ಥಿಯ ಸೋಲಿಗೆ ಆರ್.ಬಿ.ತಿಮ್ಮಾಪೂರ ಅವರೆ ನೇರ ಹೊಣೆಗಾರರು.

ಜಿಲ್ಲಾ ಲಿಂಗಾಯತ/ಪಂಚಮಸಾಲಿ ಸಮಾಜದ ಅಧ್ಯಕ್ಷ ಹಾಗೂ ಬ್ಲಾಕ್ ಕಾಂಗ್ರೆಸ ಕಮೀಟಿ ಅಧ್ಯಕ್ಷನಾದ ನನ್ನೊಡನೆಯು ಕೂಡಾ ಸರಿಯಾಗಿ ವರ್ತಿಸಲಾರದ ಕಾರಣ, ನಾನು ಜನಸಾಮಾನ್ಯರ ಕೆಲಸಗಳನ್ನು ಮಾಡಲು ಅಸಹಾಯಕನಾಗಿ ಮನನೊಂದು ಮುಧೋಳ ಬ್ಲಾಕ್ ಕಾಂಗ್ರೆಸ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಿದ್ದೇನೆಂದು ಧರೆಪ್ಪ ಸಾಂಗ್ಲೀಕರ್ ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.



**ನೂತನ ಅಧ್ಯಕ್ಷೆಗೆ ಸಚಿವರಿಂದ ಅಭಿನಂದನೆ**

**ಮಹಾಲಿಂಗಪುರ: ತಮ್ಮ ಪಕ್ಷದ ಅಭ್ಯರ್ಥಿಯ ಸೋಲಿನ ನಡುವೆಯೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಅವರು ರನ್ನಬೆಳಗಲಿ ಪಪಂ ನೂತನ ಅಧ್ಯಕ್ಷೆ ಬಿಜೆಪಿಯ ರೂಪಾ ಸದಾಶಿವ ಹೊಸಟ್ಟಿ ಅವರಿಗೆ ಹಸ್ತ ಲಾಘವ ನೀಡುವ ಮೂಲಕ ಅಭಿನಂದಿಸಿ ಎಲ್ಲರ ಗಮನ ಸೆಳೆದರು.**

## ರನ್ನಬೆಳಗಲಿ ಪಪಂ ಚುನಾವಣೆ

# ಬಿಜೆಪಿಯ ರೂಪಾ ಹೊಸಟ್ಟಿ ಅಧ್ಯಕ್ಷರಾಗಿ ಆಯ್ಕೆ: ಕಾಂಗ್ರೆಸ್‌ನ ಸಹನಾ ಸಾಂಗ್ಲಿಕರ ಅವಿರೋಧ ಆಯ್ಕೆ

## ಸಚಿವ ಆರ್.ಬಿ.ತಿಮ್ಮಾಪೂರ ಅವರಿಗೆ ಮುಖಭಂಗ: ಬಿಜೆಪಿಗೆ ಜೈ ಎದ್ದ ಇಬ್ಬರು ಕಾಂಗ್ರೆಸ್ ಸದಸ್ಯರು



**ಮಹಾಲಿಂಗಪುರ** : ತೀವ್ರ ಕುತೂಹಲ ಕೆರಳಿಸಿದ್ದ ಸಮೀಪದ ರನ್ನಬೆಳಗಲಿ ಪಟ್ಟಣ ಪಂಚಾಯತಿ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಯು ಮಂಗಳವಾರ ಜರುಗಿತು. ಅಧ್ಯಕ್ಷ ಚುನಾವಣೆಯಲ್ಲಿ ಬಿಜೆಪಿ ಸದಸ್ಯೆ ರೂಪಾ ಸದಾಶಿವ ಹೊಸಟ್ಟಿ ಅಧ್ಯಕ್ಷರಾಗಿ ಆಯ್ಕೆಯಾದರು. ಕಾಂಗ್ರೆಸ್ ಸದಸ್ಯೆ ಸಹನಾ ಸಿದ್ದು ಸಾಂಗ್ಲಿಕರ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆಯಾದರು.

ಮಂಗಳವಾರ ಮುಂಜಾನೆ 10 ರಿಂದ 11 ಗಂಟೆವರೆಗೆ ಇದ್ದ ನಾಮಪತ್ರ ಸಲ್ಲಿಕೆಯ ಅವಧಿಯಲ್ಲಿ ಹಿಂದೂಳಿದ ವರ್ಗ ಅ ಸ್ಥಾನಕ್ಕೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಪಕ್ಷದಿಂದ ಶ್ರೀಮತಿ ರೂಪಾ ಸದಾಶಿವ ಹೊಸಟ್ಟಿ, ಕಾಂಗ್ರೆಸ್ ಪಕ್ಷದಿಂದ ಗೌರವ್ವ ಸಂಗಪ್ಪ ಅಮಾತಿ, ನೀಲಕಂಠ ಸೈದಾಪೂರ ನಾಮಪತ್ರ ಸಲ್ಲಿಸಿದ್ದರು. ನೀಲಕಂಠ ಸೈದಾಪೂರ ನಾಮಪತ್ರ ವಾಪಸ ಪಡೆದುಕೊಂಡರು.

**ಬಿಜೆಪಿಗೆ 11 ಮತ ಗೆಲುವು :**

ಅಧ್ಯಕ್ಷ ಸ್ಥಾನಕ್ಕಾಗಿ ಬಿಜೆಪಿಯ ರೂಪಾ ಸದಾಶಿವ ಹೊಸಟ್ಟಿ, ಕಾಂಗ್ರೆಸ್ ಪಕ್ಷದ ಗೌರವ್ವ ಸಂಗಪ್ಪ ಅಮಾತಿ ನಡುವೆ ಸ್ಪರ್ಧೆ ಏರ್ಪಟ್ಟಿತು. ಬಿಜೆಪಿಯ 5, ಪಕ್ಷೇತರ 3, ಕಾಂಗ್ರೆಸ್ ಪಕ್ಷದ ಸಹನಾ ಸಾಂಗ್ಲಿಕರ, ದ್ರಾಕ್ಷಾಯಿಣಿ ಮುರನಾಳ ಅವರ 2 ಮತ, ಸಂಸದ ಪಿ.ಸಿ.ಗದ್ದಿಗೌಡರ ಮತ ಸೇರಿ 11 ಮತಗಳನ್ನು ಪಡೆದುಕೊಂಡು ಅಧ್ಯಕ್ಷರಾಗಿ ಆಯ್ಕೆಯಾದರು.

**ಕಾಂಗ್ರೆಸ್‌ಗೆ 9 ಮತ ಸೋಲು :**

ಕಾಂಗ್ರೆಸ್ ಅಭ್ಯರ್ಥಿ ಗೌರವ್ವ ಸಂಗಪ್ಪ ಅಮಾತಿ ಅವರು ಕಾಂಗ್ರೆಸ್ ಪಕ್ಷದ 6 ಸದಸ್ಯರು, ಪಕ್ಷೇತರ 2, ಸಚಿವ ಆರ್.ಬಿ. ತಿಮ್ಮಾಪೂರ ಸೇರಿ 9 ಮತಗಳನ್ನು ಪಡೆದುಕೊಂಡು ಪರಾಭವಗೊಂಡರು.

**ಉಪಾಧ್ಯಕ್ಷ ಅವಿರೋಧ ಆಯ್ಕೆ :**

ಹಿಂದೂಳಿದ ವರ್ಗ ಬ ಮಹಿಳಾ ಮೀಸಲಾತಿ ಇದ್ದ ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್‌ನಿಂದ ಚುನಾಯಿತರಾದ ಸಹನಾ ಸಿದ್ದು ಸಾಂಗ್ಲಿಕರ ಅವರು ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ಒಂದೇ ನಾಮಪತ್ರ ಸಲ್ಲಿಕೆಯಾದ ಕಾರಣ ಸಹನಾ ಸಿದ್ದು ಸಾಂಗ್ಲಿಕರ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆಯಾದರು.

**ಪಕ್ಷಗಳ ಬಲಾಬಲ :**

ಒಟ್ಟು 18 ಸದಸ್ಯರನ್ನು ಹೊಂದಿರುವ ರನ್ನಬೆಳಗಲಿ ಪಪಂನಲ್ಲಿ ಕಾಂಗ್ರೆಸ್‌ನಿಂದ 8, ಬಿಜೆಪಿಯಿಂದ 5, ಪಕ್ಷೇತರ 5 ಸದಸ್ಯರಿದ್ದಾರೆ. 4 ಪಕ್ಷೇತರರು ಬಿಜೆಪಿ ಬೆಂಬಲಿತ, ಓರ್ವ ಪಕ್ಷೇತರ ಸದಸ್ಯ ಕಾಂಗ್ರೆಸ್ ಬೆಂಬಲಿತ ಇರುವ ಕಾರಣ ಕಾಂಗ್ರೆಸ್ 9, ಸಚಿವರ ಒಂದು ಮತ ಸೇರಿ 10 ಮತಗಳು, ಬಿಜೆಪಿ 5, ಪಕ್ಷೇತರರು 4, ಸಂಸದರ ಒಂದು ಮತ ಸೇರಿದಂತೆ ಬಿಜೆಪಿಯಲ್ಲಿಯೂ 10 ಮತಗಳಿದ್ದವು. ಸಂಖ್ಯಾ ದೃಷ್ಟಿಯಿಂದ ಎರಡು ಪಕ್ಷಗಳಲ್ಲಿ ಸಮಬಲವಿತ್ತು. ಅಂತಿಮ ಕ್ಷಣದ ರಾಜಕೀಯ ಸ್ಥಳೀಯ ರಾಜಕೀಯ ಬೆಳವಣಿಗೆಯಲ್ಲಿ ಕಾಂಗ್ರೆಸ್ ಪಕ್ಷದ ದ್ರಾಕ್ಷಾಯಿಣಿ ಮಹಾದೇವ ಮುರನಾಳ, ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆಯಾದ ಸಹನಾ ಸಿದ್ದು ಸಾಂಗ್ಲಿಕರ ಬಿಜೆಪಿಗೆ ಬೆಂಬಲ ನೀಡಿದ್ದರಿಂದ ರನ್ನಬೆಳಗಲಿ ಪಪಂ ಗದ್ದುಗೆ ಬಿಜೆಪಿ ಮಡಿಲಿಗೆ ಸೇರಿತು.

**ಕಾಂಗ್ರೆಸ್ ಬೆಂಬಲಿಸಿದ ಪಕ್ಷೇತರ :**

ಮೊದಲು ಬಿಜೆಪಿ ಸದಸ್ಯರೊಂದಿಗೆ ಪ್ರವಾಸಕ್ಕೆ ತೆರಳಿದ್ದ 7ನೇ ವಾರ್ಡಿನ ಪಕ್ಷೇತರ ಸದಸ್ಯ ಮುತ್ತಪ್ಪ ಹಣಮಂತ ನಾಯಕ ಅವರು ಅಲ್ಲಿಂದ ತಪ್ಪಿಸಿಕೊಂಡು ಬಂದು, ಕಾಂಗ್ರೆಸ್ ಸದಸ್ಯರ ಗುಂಪು ಸೇರಿಕೊಂಡು ಅಧ್ಯಕ್ಷ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಪರವಾಗಿ ಮತ ಚಲಾಯಿಸಿದರು. ಕಾಂಗ್ರೆಸ್‌ನಿಂದ ಇಬ್ಬರು ಬಿಜೆಪಿಯತ್ತ ಮುಖಮಾಡಿದರೇ, ಇತ್ತ ಕಾಂಗ್ರೆಸ್ ಮುಖಂಡರು ಓರ್ವ ಪಕ್ಷೇತರ ಸದಸ್ಯನನ್ನು ತಮ್ಮತ್ತ ಸೆಳೆಯುವಲ್ಲಿ ಯಶಸ್ವಿಯಾದರೆ ಹೊರತು, ಅಧ್ಯಕ್ಷ ಸ್ಥಾನಕ್ಕೆ ಬೇಕಾದ ಮತ ಗಳಿಸುವಲ್ಲಿ ವಿಫಲರಾದರು.

**ಇಬ್ಬರು ಬಿಜೆಪಿಗೆ ಜೈ ಎನ್ನಲು ಕಾರಣ :**

ಮುಧೋಳ ಮತಕ್ಷೇತ್ರ ವ್ಯಾಪ್ತಿಯ ರನ್ನಬೆಳಗಲಿ ಪಪಂ ಚುನಾವಣೆಯು ಬಿಜೆಪಿ ಮತ್ತು ಕಾಂಗ್ರೆಸ್ ಎರಡು ಪಕ್ಷಗಳಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಶತಾಯಗತಾಯ ಅಧಿಕಾರಕ್ಕಾಗಿ ಎರಡು ಪಕ್ಷದವರು ತೀವ್ರ ಪೈಪೋಟಿ ನಡೆಸಿದ್ದರು. ಮುಧೋಳ ಕ್ಷೇತ್ರದ ಶಾಸಕರು, ರಾಜ್ಯ ಅಬಕಾರಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹಾಗೂ ಮುಧೋಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಬಾಗಲಕೋಟೆ ಜಿಲ್ಲಾ ಪಂಚಮಸಾಲಿ ಸಮಾಜದ ಅಧ್ಯಕ್ಷರಾದ ಧರೆಪ್ಪ ಸಾಂಗ್ಲೀಕರ ಅವರ ನಡುವಿನ ಹೊಂದಾಣಿಕೆ ಕೊರತೆ, ವಿಧಾನಸಭಾ ಚುನಾವಣೆಯಿಂದ ನಡೆದ ಶೀತಲ ಸಮರ ಹಾಗೂ ಮುಖ್ಯವಾಗಿ ರನ್ನಬೆಳಗಲಿ ಪಟ್ಟಣದ ಹಿರಿಯ ಕಾಂಗ್ರೆಸ್ ಮುಖಂಡರಾದ ಧರೆಪ್ಪ ಸಾಂಗ್ಲೀಕರ ಅವರನ್ನು ಕಾಂಗ್ರೆಸ್ ಪಕ್ಷದಲ್ಲಿ ಸಚಿವರಾದಿಯಾಗಿ ಪಟ್ಟಣದ ಯುವ ಮುಖಂಡರು ರಾಜಕೀಯವಾಗಿ ಕಡೆಗಣಿಸಿರುವ ಕಾರಣದಿಂದ ಕಾಂಗ್ರೆಸ್ ಪಕ್ಷದಿಂದ ಚುನಾಯಿತರಾದ ದ್ರಾಕ್ಷಾಯಿಣಿ ಮಹಾದೇವ ಮುರನಾಳ, ಧರೆಪ್ಪ ಸಾಂಗ್ಲೀಕರ ಅವರ ಸೊಸೆ ಸಹನಾ ಸಿದ್ದು ಸಾಂಗ್ಲೀಕರ ಅವರು ಬಿಜೆಪಿಗೆ ಬೆಂಬಲಿಸಲು ಪ್ರಮುಖ ಕಾರಣವಾಗಿದೆ ಎಂಬ ಮಾತುಗಳು ಕೇಳಿಬಂದಿವೆ.

**ಸಚಿವ ತಿಮ್ಮಾಪೂರಗೆ ಮುಖಭಂಗ :**

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕ ಕ್ಷೇತ್ರದ ರನ್ನಬೆಳಗಲಿ ಪಪಂ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಸೋಲಿನ ಮೂಲಕ ಸಚಿವ ಆರ್.ಬಿ.ತಿಮ್ಮಾಪೂರ ಅವರಿಗೆ ತೀವ್ರ ಮುಖಭಂಗದೊಂದಿಗೆ ಹಿನ್ನಡೆಯಾಗಿದೆ. ಆದರೂ ಚುನಾವನಾ ಪ್ರಕ್ರೀಯೆ ಮುಗಿಸಿ ಹೋಗುವಾಗ ಸಚಿವರು ನೂತನ ಅಧ್ಯಕ್ಷೆ ರೂಪಾ ಹೊಸಟ್ಟಿ ಅವರಿಗೆ ಹಸ್ತಲಾಘವ ಮೂಲಕ ಅಭಿನಂದಿಸಿ ತೆರಳಿದ್ದು ವಿಶೇಷವಾಗಿತ್ತು.

ಮುಧೋಳ ತಹಶೀಲ್ದಾರ ವಿನೋದ ಹತ್ತಳ್ಳಿ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಉಪ ತಹಶೀಲ್ದಾರ ಆರ್.ಡಿ.ನಾಯಕ, ಕಂದಾಯ ನಿರೀಕ್ಷಕ ಪ್ರಕಾಶ ಕುಂದರಗಿ, ಕೇಶ ವರ್ಕರ್ ಜೆ.ಡಿ ನಿಂಬಾಳ್ಕರ್, ಪಪಂ ಮುಖ್ಯಾಧಿಕಾರಿ ಎನ್.ಎ.ಲಮಾಣಿ ಉಪಸ್ಥಿತರಿದ್ದರು. ಮುಧೋಳ ಸಿಪಿಆಯ್ ಮಹಾದೇವ ಶಿರಹಟ್ಟಿ, ಮತ್ತು ಪಿಎಸ್‌ಆಯ್ ಅಜೀತಕುಮಾರ ಹೊಸಮನಿ, ಲೋಕಾಪೂರ ಎಸ್ಸೈ ಜಕನೂರ ನೇತೃತ್ವದಲ್ಲಿ ಎರಡು ಡಿಆರ್ ಮತ್ತು ಒಂದು ಕೆಎಸ್‌ಆರ್‌ಪಿ ವಾಹನಗಳು, 50ಕ್ಕೂ ಅಧಿಕ ಪೊಲೀಸ್‌ರು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಭದ್ರತೆ ಒದಗಿಸಿದ್ದರು.

ಪಪಂ ಸಭಾ ಭವನದ ಒಳಗೆ ಚುನಾವಣೆಯ ಕಾವು ನಡೆಯುತ್ತಿದ್ದರೆ ಹೊರಗೆ ಮಳೆರಾಯನ ಆಗಮನವು ಕೆಲಕಾಲ ಉಭಯ ಪಕ್ಷಗಳ ಕಾರ್ಯಕರ್ತರ ಉತ್ಸಾಹಕ್ಕೆ ಬ್ರೇಕ್ ಹಾಕಿತ್ತು.

# ಬಿಜೆಪಿ ಸದಸ್ಯತ್ವ ಅಭಿಯಾನದ ಜಿಲ್ಲಾ ಕಾರ್ಯಾಗಾರ ಜಿಲ್ಲಾದ್ಯಂತ ಮೂರು ಲಕ್ಷ ಸದಸ್ಯತ್ವದ ಗುರಿ:ಡಾ.ಬೆಲ್ದಾಳೆ




**ಯಾದಗಿರಿ** : ಸದಸ್ಯತ್ವ ಅಭಿಯಾನ ಆರಂಭವಾಗಲಿದ್ದು, ಜಿಲ್ಲಾದ್ಯಂತ ಸೆ.2ರಿಂದ ಮೂರು ಲಕ್ಷ ಸದಸ್ಯರನ್ನು ಮಾಡುವ ಗುರಿ ಹೊಂದಲಾಗಿದೆ ಎಂದು ರಾಜ್ಯ ಕಾರ್ಯದರ್ಶಿಯಾದ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ತಿಳಿಸಿದ್ದರು.

ಗ್ರೀನ್ ಸಿಟಿ ಬಳಿಯ ಪಕ್ಷದ ಜಿಲ್ಲಾ ಕಚೇರಿಯಲ್ಲಿ ಮಂಗಳವಾರ ಆಯೋಜಿಸಿದ್ದ ಸದಸ್ಯತ್ವ ಅಭಿಯಾನ ಜಿಲ್ಲಾ ಕಾರ್ಯಾಗಾರದಲ್ಲಿ ಮಾತನಾಡಿ, ಎರಡು ಹಂತದಲ್ಲಿ ಅಭಿಯಾನ ನಡೆಯಲಿದೆ. ಜಿಲ್ಲೆಯ ಎಲ್ಲಾ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಹೇಳಿದರು.

ಸದಸ್ಯತ್ವ ಅಭಿಯಾನಕ್ಕೆ ಸೆ2 ರಂದು ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಲಿದ್ದಾರೆ. ಕಳೆದ ಬಾರಿಯಂತೆ ಪ್ರಸ್ತುತವೂ ಜಿಲ್ಲೆಯಲ್ಲಿ ಅತ್ಯಧಿಕ ಸದಸ್ಯತ್ವ ಮಾಡುವ ನಿಟ್ಟಿನಲ್ಲಿ ಜಿಲ್ಲಾ, ಮಂಡಲ ಹಾಗೂ ಎಲ್ಲಾ ಮೋರ್ಚಾಗಳು ಕಾರ್ಯಯೋಜನೆ ಹಾಕಿಕೊಳ್ಳಬೇಕು ಎಂದರು ಹಾಗು ಯಾದಗಿರಿ ಜಿಲ್ಲೆಯಲ್ಲಿ ರಾಜ್ಯದಲ್ಲೇ ಹೆಚ್ಚು ಸದಸ್ಯತ್ವ ಮಾಡಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಅಮೀನರಡ್ಡಿ ಯಾಳಗಿ ಅಧ್ಯಕ್ಷ ವಹಿಸಿ ಮಾತನಾಡಿದ ಅವರು ಯಾದಗಿರಿ ಜಿಲ್ಲೆಯಲ್ಲಿ ಇರುವ ಪ್ರತಿ ಬೂತ್‌ಗೆ ಕನಿಷ್ಠ 300 ಮಂದಿಯನ್ನು ಸದಸ್ಯತ್ವ ಮಾಡಿದರೆ ಸುಲಭವಾಗಿ ಗುರಿ ತಲುಪಬಹುದಾಗಿದೆ, ಮತಪಟ್ಟಿ ಹಿಡಿದು ಮಾಡುತ್ತಿದ್ದದ್ದು ಹಳೆಯ ಪದ್ಧತಿಯಾಗಿದೆ, ಈಗ ಮೊಬೈಲ್ ಮೂಲಕ ಸದಸ್ಯತ್ವ ದಾಖಲು ಮಾಡಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಕು. ಲಲಿತಾ ಅನಪುರ,ಯುವ ಮುಖಂಡ ಮಹೇಶರಡ್ಡಿ ಮುದ್ನಾಳ,ನಾಗರತ್ನ ಕುಪ್ಪಿ, ದೆವಿಂದ್ರನಾಥ ನಾದ,ಹೆಚ್‌ಸಿ.ಪಾಟೀಲ್, ಸಿದ್ದನಗೌಡ ಕಾಡಂನೊರ,ಸುರೇಶ ಸಜ್ಜನ್,ವೀಣಾ ಮೋದಿ,ನಗರ ಮಂಡಲ ಅಧ್ಯಕ್ಷ ಲಿಂಗಪ್ಪ ಹತ್ತಿಮನಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರು ಕಾಮ ಸ್ವಾಗತಿಸಿದರು,ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಿರೂಪಿಸಿದರು,ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೇಲಪ್ಪ ಗುಳಗಿ ವಂದಿಸಿದರು.




**ಮೂಡಲಗಿ : ತಾಲೂಕಿನ ಕಲ್ಲೋಳಿ ಪಟ್ಟಣದ ಕಾಂಗ್ರೇಸ್ ಮುಖಂಡ ಬಾಳಪ್ಪ ಬೆಳಕೂಡ ಮನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಭೇಟಿ ನೀಡಿ ಸನ್ಮಾನ ಸ್ವೀಕರಿಸುತ್ತಿರುವುದು. ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ,ಸತೀಶ ಜಾರಕಿಹೊಳಿ ಮತ್ತು ಬಾಳಪ್ಪ ಬೆಳಕೂಡ,ಬಸವರಾಜ ಕಡಾಡಿ,ರಾವಸಾಹೇಬ ಬೆಳಕೂಡ,ಬಸವರಾಜ ಬೆಳಕೂಡ,ಮಹಾಂತೇಶ ಕಡಾಡಿ,ಪ್ರಭು ಕಡಾಡಿ ಸೇರಿದಂತೆ ಅನೇಕರಿದ್ದರು.**

# ಕೃಷ್ಣೆಯ ಕೃಷ್ಣಾರತಿ ರಾಷ್ಟ್ರೀಯ ಕಾರ್ಯಕ್ರಮವಾಗಲಿ: ಸಂಗಮೇಶ



**ಜಮಖಂಡಿ** : ಕಾವೇರಿ, ತುಂಗಭದ್ರ, ಶರಾವತಿ ಲಭಸಿರುವ ಗೌರವವನ್ನು ನಾವೆಲ್ಲರೂ ಕೃಷ್ಣೆಗೆ ನೀಡುವ ನಿಟ್ಟಿನಲ್ಲಿ ಕೃಷ್ಣಾರತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾಶಿಯಲ್ಲಿ ಗಂಗಾರತಿ ಮಾದರಿಯಲ್ಲಿ ಕೃಷ್ಣೆಗೆ ಕೃಷ್ಣಾರತಿ ಮಾಡುವ ಮೂಲಕ ನಮ್ಮ ಭಾಗದ ಜನರು ಧನ್ಯತಾಭಾವ ವ್ಯಕ್ತಪಡಿಸಿದ್ದಾರೆ ಎಂದು ಎಂ.ಆರ್.ಎನ್. ನಿರಾಣಿ ಪೌಂಡೇಶನ್ ಕಾರ್ಯನಿರ್ವಾಹಕ ಸಂಗಮೇಶ ನಿರಾಣಿ ಹೇಳಿದರು.

ತಾಲೂಕಿನ ಹಿಪ್ಪರಗಿಯ ಶ್ರೀ ಸಂಗಮೇಶ ದೇವಸ್ಥಾನದ ಸಭಾಭವನದಲ್ಲಿ ಕೃಷ್ಣಾಷ್ಟಮಿ ನಿಮಿತ್ತ ಮಾಜಿ ಸಚಿವ ಮುರಗೇಶ ನಿರಾಣಿಯವರ ಹುಟ್ಟುಹಬ್ಬ ಆಚರಣೆ ಮತ್ತು ಕೃಷ್ಣಾನದಿಗೆ ಕೃಷ್ಣಾರತಿ ಕಾರ್ಯಕ್ರಮದ ವಿಚಾರ ಗೋಷ್ಠಿಯಲ್ಲಿ ಮಾತನಾಡಿದರು.

ನಮ್ಮ ಭಾರತದ ಸಂಸ್ಕೃತಿ ಇಂದಿನದಲ್ಲ ತಲೆಮಾರಿನಿಂದ ಉಳಿಸಿಕೊಂಡಿರುವ ಪದ್ಧತಿಯಾಗಿದೆ. ನದಿ ಎಂದರೆ ನೀರು ನಮ್ಮ ಜೀವನವನ್ನು ಪಾವನಗೊಳಿಸುವ ಶಕ್ತಿಯಿದೆ ಎಂದು ನಂಬಿದವರು ನಾವು. ಇಂದು ಕೃಷ್ಣೆಯನ್ನು ತಲೆ ಮೇಲೆ ಹೊತ್ತು ಪೂಜಿಸುವ ಕೆಲಸ ಈ ಭಾಗದ ಜನರು ಮಾಡಿದ್ದಾರೆ. ಕೃಷ್ಣೆಯನ್ನು ತಾಯಿ ರೂಪದಲ್ಲಿ ಪೂಜಿಸುವ ನಿಮಗೆ ನನ್ನ ಪ್ರಣಾಮಗಳು ಎಂದರು. ಕಾವೇರಿ ನದಿಗಿಂತ ಕೃಷ್ಣಾನದಿ ಮೂರು ಪಟ್ಟು ದೊಡ್ಡದು. ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂದ್ರಪ್ರದೇಶದ ಮೂಲಕ 1462 ಕೀ.ಮೀ. ಉದ್ದವಾದ ನದಿಯಾಗಿದೆ. ಮಹಾರಾಷ್ಟ್ರದಲ್ಲಿ ತಾಯಿ, ಕರ್ನಾಟಕದಲ್ಲಿ ಜೀವನದಿ ಮತ್ತು ಆಂದ್ರಪ್ರದೇಶದಲ್ಲಿ ಪಾತಾಳ ಗಂಗೆ ಪೂಜಿಸುತ್ತಾರೆ. ಐತಿಹಾಸಿಕ ಮತ್ತು ಪೌರಾಣಿಕ ಹಿನ್ನಲೆಯಲ್ಲಿ ಹೊಂದಿರುವ ಕೃಷ್ಣಾನದಿಗೆ ತನ್ನದೇಯಾದ ಇತಿಹಾಸವಿದೆ. ಕಲಿಯುಗದಲ್ಲಿ ಕೃಷ್ಣದೇವ ಜನರ ಉದ್ಧಾರಕ್ಕಾಗಿ ಪುಟ್ಟು ಮಗುವಾಗಿ ಹುಟ್ಟುವ ಮೂಲಕ ನದಿಯಾಗಿ ಜನ್ಮ ತಾಳಿದ ಪೌರಾಣಕದಲ್ಲಿ ಉಲ್ಲೇಖವಿದೆ. ಕೃಷ್ಣಾನದಿಗೆ ನಡೆಯುವ ಕೃಷ್ಣಾರತಿ ಕಾರ್ಯಕ್ರಮ ರಾಷ್ಟ್ರೀಯ ಆಚರಣೆಯಾಗಲಿ. ಸರಕಾರಿ ಕಾರ್ಯಕ್ರಮವಾದಲ್ಲಿ ಕೃಷ್ಣೆಯ ಮಹತ್ವ ದೇಶದ ಜನರಿಗೆ ತಲುಪಲಿದೆ. ಸರಕಾರ ನಿರಾಶಕ್ತಿ ತೋರಿದಲ್ಲಿ ಎಂ.ಆರ್. ಎನ್. ಪೌಂಡೇಶನ್ವತಿಯಿಂದ ಕೃಷ್ಣಾರತಿ ಹಮ್ಮಿಕೊಳ್ಳುವ ಮೂಲಕ ಕೃಷ್ಣಯ ಮಹತ್ವ ಎಲ್ಲರು ತಿಳಿದುಕೊಳ್ಳಲಿ ಎಂದರು.

ಹುಕ್ಕೇರಿಯ ಹಿರೇಮಠದ ಗುರುಶಾಂತೇಶ್ವರ ಶಿವಾಚಾರ್ಯರು ಮಾತನಾಡಿ ನದಿಗಳನ್ನು ಭಕ್ತಿ ಶ್ರದ್ದೆಯಿಂದ ಪೂಜಿಸಿದರೆ ಲೋಕಕ್ಕೆ ಸುಖ ಶಾಂತಿ ದೊರೆಯಲಿದೆ. ನಿರಾಣಿ ಸಮೂಹ ಈ ಭಾಗದ ಜನರಿಗೆ ಅನುಕೂಲ ಮಾಡುತ್ತಿದೆ. ಹಿಪ್ಪರಗಿಯ ಕೃಷ್ಣಾನದಿ ತೀರದಲ್ಲಿ ಪ್ರತಿವರ್ಷ ಕೃಷ್ಣ ಜನ್ಮಾಷ್ಟಮಿ ದಿನದಂದು ಕೃಷ್ಣಾರತಿ ನಿರಂತರವಾಗಿ ನಡೆಯಲಿ ಎಂದರು.

ವೇದಿಕೆಯಲ್ಲಿ ಹಿಪ್ಪರಗಿಯ ಸಂಗಮೇಶ್ವರ ದೇವಸ್ಥಾನದ ಪ್ರಭುಜೀ ಬೆನ್ನಾಳೆ ಅಧ್ಯಕ್ಷತೆ ವಹಿಸಿದ್ದರು. ಪರಾಮಪೂಜ್ಯ ಮಾಹಾದೇವ ಶಿವಾಚಾರ್ಯರು, ರುದ್ರಾವಧುತ ಮಠದ ಸಹಜಾನಂದ ಅವಧೂತರು, ಮುತ್ತಿನಕಂತಿಮಠದ ಶಿವಲಿಂಗ ಶಿವಾಚಾರ್ಯರು, ಹಲ್ಯಾಳದ ಹರ್ಷನಂದ ಶ್ರೀಗಳು ಸಹಿತ ಹತ್ತಾರು ಪರಮಪೂಜ್ಯರು ಆರ್ಶೀವಚನ ನೀಡಿದರು.

# ಕಾಶಿ ಗಂಗಾರತಿ ಹಿಪ್ಪರಗಿ ಕೃಷ್ಣಾನದಿ ಕೃಷ್ಣೆಗೆ ಲಭಿಸಿತು





**ಜಮಖಂಡಿ**:ಕಾಶಿಗಂಗಾನದಿಲಭಿಸುತ್ತಿರುವ ಗಂಗಾರತಿ ವಿಶೇಷತೆ ಮಹತ್ವ ನಮ್ಮ ತಾಲೂಕಿನ ಹಿಪ್ಪರಗಿಯ ಸಂಗಮೇಶ್ವರ ದೇವಸ್ಥಾನದ ಪಕ್ಕದಲ್ಲಿರುವ ಕೃಷ್ಣಾನದಿ ಕೃಷ್ಣೆಗೆ ಕೃಷ್ಣಾರತಿ ನೆರವೇರುವ ಮೂಲಕ ನೆರೆದಿದ್ದ ಸಾವಿರಾರು ಜನರು ಧನ್ಯತಾಭಾವ ಬೀರಿದರು.

ತಾಲೂಕಿನ ಹಿಪ್ಪರಗಿ ಗ್ರಾಮಸ್ಥರ ಮತ್ತು ಕೃಷ್ಣಾನದಿ ತೀರದ ಎಡ-ಬಲದಂಡೆ ರೈತರು ಮತ್ತು ಎಂ.ಆರ್.ಎನ್. ಫೌಂಡೇಶನ್ ಹಮ್ಮಿಕೊಂಡಿದ್ದ ಕೃಷ್ಣಾಷ್ಟಮಿ ನಿಮಿತ್ತ ಮಾಜಿ ಸಚಿವ ಮುರಗೇಶ ನಿರಾಣಿ ಹುಟ್ಟುಹಬ್ಬ ಮತ್ತು ಕಾಶಿ ಗಂಗಾರತಿ ಮಾದರಿಯಲ್ಲಿ ನಡೆದ ಕೃಷ್ಣೆಗೆ ಕೃಷ್ಣಾರತಿ ಅದ್ದೂರಿ ಕಾರ್ಯಕ್ರಮಕ್ಕೆ ಪರಮಪೂಜ್ಯರು, ಜಿಲ್ಲಾಉಸ್ತುವಾರಿ ಸಚಿವರು, ಶಾಸಕರು, ಮಾಜಿ ಶಾಸಕರು, ಅಥಣಿ, ಜಮಖಂಡಿ, ಬಬಲೇಶ್ವರ ತಾಲೂಕಿನ ರೈತರು ಸೇರಿದಂತೆ ಸಾವಿರಾರು ಸಾಕ್ಷಿಯಾಗುವ ಮೂಲಕ ಉತ್ತರಕರ್ನಾಟಕ ಕೃಷ್ಣೆಗೆ ನಡೆದ ವೈಭವದಿಂದ ಕೂಡಿದ ಅದ್ದೂರಿ ಕೃಷ್ಣಾರತಿ ಕಾರ್ಯಕ್ರಮಕ್ಕೆ ಸಾಕ್ಷಿಯಾಗುವ ಮೂಲಕ ಗಂಗಾರತಿ ನೋಡದೇ ಇದ್ದ ಬಹುತೇಕ ಜನರು ಭಾವುಕರಾದರು.

ಮೂರು ಬೋಟಗಳ ಮೂಲಕ ಕೃಷ್ಣಾನದಿಯಲ್ಲಿ ತೆರಳಿದ ಸುಕ್ಷೇತ್ರ ಕಾಶಿಯಿಂದ ಆಗಮಿಸಿದ ಪೂಜಾ ಅರ್ಚಕರ ತಂಡದವರು, ಕಾರ್ಯಕ್ರಮಕ್ಕೆ ಆಗಮಿಸಿದ 25ಕ್ಕೂಹೆಚ್ಚು ಪರಮಪೂಜ್ಯರು, ಎಂ.ಆರ್.ಎನ್.ನಿರಾಣಿ ಪೌಂಡೇಶನ್ ಕಾರ್ಯನಿರ್ವಾಹಕ ಸಂಗಮೇಶ ನಿರಾಣಿ, ಗ್ರಾಮಸ್ಥರು ಕೃಷ್ಣೆಗೆ ಪೂಜೆ ಸಲ್ಲಿಸಿ, ಕೃಷ್ಣಾರತಿ ಸಲ್ಲಿಸಿದರು. 522.05 ಟಿಎಂಸಿ ನೀರು ಸಂಗ್ರದವಾಗಿದ್ದ ಹಿಪ್ಪರಗಿ ಬ್ಯಾರೇಜ್ ಪಕ್ಷದಲ್ಲಿ ಅಂದಾಜು 1 ಕ್ಯೂಸೆಸ್ ನೀರು ಹರಿಯುತ್ತಿರುವ ನದಿ ಮಧ್ಯದಲ್ಲಿ ಕೃಷ್ಣಾರತಿ ನೋಡುಗರ ಗಮನ ಸೆಳೆಯಿತು.

ಬೆಳಿಗ್ಗೆ 8 ಗಂಟೆಗೆ ಎಂದು ಎಂ.ಆರ್.ಎನ್. ನಿರಾಣಿ ಪೌಂಡೇಶನ್ ಕಾರ್ಯನಿರ್ವಾಹಕ ಸಂಗಮೇಶ ನಿರಾಣಿ ಸಹಿತ ಇತರರು ಪೂಜೆಯೊಂದಿಗೆ ಕೃಷ್ಣಾನದಿಗೆ ಬಾಗಿಣ ಅರ್ಪಸಿದರು. ಹಿಪ್ಪರಗಿಯ ಸಂಗಮೇಶ ದೇವಸ್ಥಾನದಲ್ಲಿ ಕೃಷ್ಣಾನದಿ ಇತಿಹಾಸ ಮತ್ತು ಪರಂಪರೆ ಕುರಿತು ವಿಚಾರಗೋಷ್ಠಿ ನಡೆಯಿತು.

ಸಂಜೆ ಪೂಜ್ಯರಿಂದ, ಶ್ರೀಗಳಿಂದ ಕೃಷ್ಣಾನದಿಗೆ ವಿಶೇಷ ಪೂಜೆ ನಡೆಯಿತು. ನಂತರ ಬೋಟಗಳಲ್ಲಿ ತೆರಳಿದ ಭಕ್ತರಿಂದ ಕೃಷ್ಣಾರತಿ ನಡೆಯಿತು. ನಂತರ ಸತತ ಎರಡು ಗಂಟೆವರೆಗೆ ಉತ್ತರಪ್ರದೇಶದ ಕಾಶಿ ದೇವಸ್ಥಾನದಿಂದ ಆಗಮಿಸಿ ಗಂಗಾರತಿ ತಂಡದ ಅರ್ಚಕರಿಂದ ಕೃಷ್ಣಾನದಿಗೆ ಭವ್ಯವಾಗಿ ಕೃಷ್ಣಾರತಿ ನಡೆಸುವ ಮೂಲಕ ಈ ಭಾಗದ ಜನರಿಗೆ ನದಿಗಳೀಗೆ ಸಲ್ಲಿಸುವ ಪೂಜೆ ಮತ್ತು ಅದರ ಮಹತ್ವ ಕುರಿತು ನೃತ್ಯದ ಮೂಲಕ ಪ್ರದರ್ಶಿಸಿದರು.

# ಹಿರಿಯರು ಸಮಾಜದ ಕಣ್ಣುಗಳಿದ್ದಂತೆ



**ಲಕ್ಷ್ಮೇಶ್ವರ :** ಕಿರಿಯರ ಭವಿಷ್ಯದ ಏಳ್ಗೆಗಾಗಿಯೇ ತಮ್ಮನ್ನೇ ಸಮರ್ಪಿಸಿಕೊಂಡ ತಂದೆ-ತಾಯಿಗಳು ಮತ್ತು ಹಿರಿಯರನ್ನು ಗೌರವ ಭಾವನೆಯಿಂದ ಕಾಣಬೇಕು. ಅವರ ಅನುಭವ, ಮಾರ್ಗದರ್ಶನ ಸಮಾಜಕ್ಕೆ ದಾರಿದೀಪ ಎಂದು ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಅವರು ಪಟ್ಟಣದ ಚಂಬಣ್ಣ ಬಾಳಿಕಾಯಿ ಅವರ ಸೋಮೇಶ್ವರ ಇಂಡಸ್ಟ್ರೀಜ್ ಆವರಣದಲ್ಲಿ ಲಕ್ಷ್ಮೇಶ್ವರ ತಾಲೂಕಾ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘ, ಕರ್ನಾಟಕ ಹಿರಿಯ ನಾಗರಿಕರ ಹಾಗೂ ನಿವೃತ್ತ ನೌಕರರ ಸಂಘದ ಸಹಯೋಗದಲ್ಲಿ ನಡೆದ ಸಂಸದರಿಗೆ ಸನ್ಮಾನ, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರಿಗೆ ಗೌರವ ಸಮರ್ಪಣೆ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಹಿರಿಯರು ಸಮಾಜದ ಕಣ್ಣುಗಳಿದ್ದಂತೆ. ಅವರು ನೀಡಿದ ಸಂಸ್ಕಾರ, ಸಂಸ್ಕೃತಿ, ಆಚಾರ-ವಿಚಾರಗಳು ಬದುಕಿಗೆ ಮೂಲಾಧಾರವಾಗಿವೆ. ಹಿರಿಯರು, ಸಾಧಕರು, ವಿದ್ಯಾರ್ಥಿಗಳನ್ನು ಸನ್ಮಾನಿಸುವ ಕಾರ್ಯ ಮಾಡಿದ ಪಂಚಮಸಾಲಿ ಸಮಾಜದ ಕಾರ್ಯ ಶ್ಲಾಘನೀಯ. ಕೃಷಿಯನ್ನೇ ಮೂಲಾಧಾರವಾಗಿಸಿಕೊಂಡ ಬಹುಸಂಖ್ಯಾತ ಪಂಚಮಸಾಲಿ ಸಮಾಜದವರು ಸ್ವಾಭಿಮಾನ, ಸಂಘಟನೆ, ಸ್ವಾವಲಂಬನೆ, ಸಹಕಾರ, ಸಹಬಾಳ್ವೆಗಳೆಂಬ ಉದಾತ್ತ ತತ್ವಗಳನ್ನು ಹೊಂದಿ ಇತರೇ ಸಮಾಜದವರೊಂದಿಗೆ ಉತ್ತಮ ಬಾಂಧವ್ಯ ಹೊಂದಿ ಇತರೇ ಸಮಾಜಕ್ಕೆ ಮಾದರಿಯಾಗಿದ್ದಾರೆ ಎಂದು ಹೇಳಿದರು.

"ಲಕ್ಷ್ಮೇಶ್ವರ, ಶೀರಹಟ್ಟಿ ಭಾಗದ ಜನತೆಗೆ ನನ್ನ ಕೋಟಿ ನಮನ. ಅವರ ಋಣ ತೀರಿಸುವ ಗುರುತರ ಜವಾಬ್ದಾರಿ ನನ್ನ ಮೇಲಿದೆ. ಮುಖ್ಯವಾಗಿ ಈ ಭಾಗದ ಜನರ ಮುಖ್ಯ ಬೇಡಿಕೆ ಗದಗ-ಯಲವಗಿ ರೇಲ್ವೆ ಮಾರ್ಗ ನಿರ್ಮಾಣಕ್ಕೆ ಮೊದಲ ಹಂತದ 150 ಕೋಟಿ ರೂ ಮೀಸಲಿರಿಸಲಾಗಿದೆ. ರಾಜ್ಯ ಸರ್ಕಾರಕ್ಕೆ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲು ಮನವಿ ಮಾಡಿದ್ದೇನೆ. ಕೈಗಾ-ಇಳಕಲ್ ರಾಜ್ಯ ಹೆದ್ದಾರಿಯನ್ನು ರಾಷ್ಟೀಯ ಹೆದ್ದಾರಿಯಾಗಿಸಲು ಕೇಂದ್ರ ಸಚಿವ ನಿತಿನ್ ಗಡ್ಕರಿಯವರ ಮನವೊಲಿಸುವ ಪ್ರಯತ್ನ ಮಾಡಿದ್ದೇನೆ ಎಂದು ಹೇಳಿದರು.

ಮಾಜಿ ಸಚಿವ, ಶಾಸಕ ಸಿ.ಸಿ ಪಾಟೀಲ ಮಾತನಾಡಿ, ಸ್ವಧರ್ಮ ನಿಷ್ಠೆ-ಪರಧರ್ಮ ಸಹಿಷ್ಣುತೆ ಎಲ್ಲರ ಮಂತ್ರವಾಗಬೇಕು. ಹಿರಿಯರನ್ನು ಗೌರವಿಸುವುದು ನಮ್ಮ ನಾಡಿನ ಸಂಪ್ರದಾಯ, ಸಂಸ್ಕಾರವಾಗಿದೆ. ಸಮಾಜ ನಮಗೇನು ಮಾಡಿದೆ ಎನ್ನುವದಿಕ್ಕಿಂತ ಸಮಾಜಕ್ಕೆ ನಮ್ಮ ಕೊಡುಗೆ ಏನೂ ಎಂಬ ಆತ್ಮ ವಿಮರ್ಶೆ ನಮ್ಮೆಲ್ಲರ ಆದ್ಯತೆಯಾಗಬೇಕು. ಯಾವ ಸಮಾಜ ತನ್ನ ಉನ್ನತಿ, ಶ್ರೇಯಸ್ಸಿಗಾಗಿ ಶ್ರಮಿಸಿರುತ್ತದೆಯೊ ಅದರ ಋಣ ತೀರಿಸುವ ನೈತಿಕ ಹೊಣೆಗಾರಿಕೆ ಮತ್ತು ಜವಾಬ್ದಾರಿಯನ್ನು ಅರಿತುಕೊಂಡಾಗ ಮಾತ್ರ ಸಮಾಜ ಇನ್ನಷ್ಟು ವಿಶಾಲವಾಗಿ ಬೆಳೆಯಲು ಸಾಧ್ಯ. ಈ ನಿಟ್ಟಿನಲ್ಲಿ ಲಕ್ಷ್ಮೇಶ್ವರ ತಾಲೂಕು ಪಂಚಮಸಾಲಿ ಸಮಾಜ ಸಮಾಜದ ಅಧ್ಯಕ್ಷ ಮಂಜುನಾಥ ಮಾಗಡಿ ಅವರು ಸಮಾಜ ಸಂಘಟನೆಯ ಜತೆಗೆ ಸಮಾಜಮುಖಿ ಕಾರ್ಯ ಮಾಡುತ್ತಿರುವುದು ಶ್ಲ್ಯಾಘನೀಯ ಎಂದರು.

ಈ ವೇಳೆ ವೈದ್ಯರತ್ನ ಪುರಸ್ಕೃತ ಡಾ.ಶ್ರೀಕಾಂತ ಕಾಟೇವಾಲೆ, ಕಾಯಕರತ್ನ ಡಾ. ಪೂರ್ಣಾಜಿ ಖರಾಟೆ ಸೇರಿ ಹಿರಿಯರು, ರೈತರು, ಮಾಜಿ ಸೈನಿಕರು, ವಿದ್ಯಾರ್ಥಿಗಳು, ಪತ್ರಕರ್ತರನ್ನು ಸನ್ಮಾನಿಸಲಾಯಿತು. ಹೂವಿನಶಿಗ್ಲಿಯ ಶ್ರೀ ಚನ್ನವೀರ ಮಹಾಸ್ವಾಮಿಗಳು ಸಾನಿಧ್ಯವಹಿಸಿ ಆಶೀರ್ವಚನ ನೀಡಿ-ದರು. ಪಂಚಮಸಾಲಿ ಸಂಘದ ತಾಲೂಕ ಅಧ್ಯಕ್ಷ ಮಂಜುನಾಥ ಮಾಗಡಿ, ಪಂಚಮಸಾಲಿ ಸಮಾಜದ ಮಾಜಿ ಅಧ್ಯಕ್ಷ ಚಂಬಣ್ಣ ಬಾಳಿಕಾಯಿ, ಡಿ.ಬಿ ಬಳಿಗಾರ, ಸಣ್ಣವೀರಪ್ಪ ಹಳೆಪ್ಪನವರ, ಗುರುನಾಥ ದಾನಪ್ಪನವರ, ಎಂ.ಆಯ್ ಮುಳಗುಂದ, ಸಿ.ಆರ್ ಲಕ್ಕುಂಡಿಮಠ, ಸಿ.ಜಿ ಹಿರೇಮಠ, ಜಿ.ವಿ ಪಾಟೀಲ, ಅಶೋಕ ಪಲ್ಲೇದ, ಸರೋಜಕ್ಕ ಬನ್ನೂರ, ಎನ್.ವಿ ಹೇಮಗಿರಿಮಠ, ನಿಂಗಪ್ಪ ಬನ್ನಿ. ಸಿ.ವಿ ಕೋಲಕಾರ, ಶಕುಂತಲಾ ಅಳಗವಾಡಿ, ಡಿ.ವೈ ಹುನಗುಂದ. ಈರಣ್ಣ ಕಟಗಿ, ಎಸ್.ಎನ್ ಅಂಬಿಗೇರ ಸೇರಿ ಅನೇಕರು ಹಾಜರಿದ್ದರು. ನಾಗರಾಜ ಕುಲಕರ್ಣಿ ಸ್ವಾಗತಿಸಿದರೆ, ಮೆಹಬೂಬ್ ಹುಸೇನ ಮುಲ್ಲಾ ಪ್ರಾಸ್ತಾವಿಕವಾಗಿ ಮಾತನಾಡಿದರೆ, ಶೈಲಾ ಆದಿ ವಂದಿಸಿದರು.

# ತಾಕತ್ತಿದ್ದರೆ ನನ್ನ ಜೊತೆಗೆ ಚರ್ಚೆಗೆ ಬರಲು ಮಾಜಿ ಶಾಸಕ ದೊಡ್ಡನಗೌಡರಿಗೆ ಬಹಿರಂಗ ಸವಾಲು



**ಇಳಕಲ್ :** ಹುನಗುಂದ ವಿಧಾನಸಭಾ ಕ್ಷೇತ್ರದಲ್ಲಿ ಆದ ಕೆಲಸ ಕಾಮಗಾರಿಕೆಗಳ ಪ್ರಗತಿ ಯಾರಿಂದ ಆಗಿದೆ ಎಂದು ತಿಳಿಯಲು ತಾಕತ್ತಿದ್ದರೆ ನನ್ನ ಜೊತೆಗೆ ಚಚೆ9ಗೆ ಬನ್ನಿ ಎಂದು ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ಅವರಿಗೆ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಶಾಸಕ ವಿಜಯಾನಂದ ಕಾಶಪ್ಪನವರ ಬಹಿರಂಗ ಸವಾಲು ಹಾಕಿದರು.

ಸೋಮವಾರ ಕಾಂಗ್ರೆಸ್ ಕಾರ್ಯಾಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಗಣಿ ಇಲಾಖೆಯಲ್ಲಿಸುಮಾರು 15ಕೋಟಿ ಹಣ ಇತ್ತು. ಅದರ ಸದ್ಬಳಕೆ ಮಾಡಲು ನಿಮಗೇಕೆ ಆಗಲಿಲ್ಲ ಎಂದು ಪ್ರಶ್ನಿಸಿದ ಶಾಸಕರು, ಮೂವತ್ತು ಸಾವಿರ ಮತಗಳ ಅಂತರದಿಂದ ಸೋತು ಮೂಲೆಗುಂಪಾದರೂ ಇನ್ನೂ ಮಾಜಿ ಶಾಸಕರಿಗೆ ಬುದ್ಧಿ ಬಂದಿಲ್ಲ. ತಮ್ಮ ಬೆಂಬಲಿಗರ ಮಾತು ಕೇಳಿ ಸುದ್ದಿಗೋಷ್ಠಿ ನಡೆಸಿ ಏನೇನೋ ಮಾತನಾಡುತ್ತಾರೆ ಎಂದು ಟೀಕಿಸಿದರು.

ತಮ್ಮ ಈ ಒಂದು ವರ್ಷದ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ವಿಧಾನಸಭಾ ಕ್ಷೇತ್ರದಲ್ಲಿ ಮಾಡಿದ ಕುರಿತು ಅಂಕಿ ಅಂಶಗಳ ದಾಖಲಾತಿ ಪ್ರದಶಿ9ಸಿ ಮಾಹಿತಿ ನೀಡಿದರು. 19 ಸದಸ್ಯರು ನಗರಸಭೆಯಲ್ಲಿ ಇದ್ದರೂ ಆಡಳಿತ ಹಿಡಿಯಲಾಗದ ಅಸಮರ್ಥರು ತಮ್ಮ ಬಗ್ಗೆ ಏನು ಮಾತನಾಡುತ್ತಾರೆ ಎಂದು ವ್ಯಂಗವಾಡಿದರು.

ನಗರಸಭೆ ಅಧ್ಯಕ್ಷೆ ಸುಧಾರಾಣಿ ಸಂಗಮ್ ಉಪಾಧ್ಯಕ್ಷೆ ಕಾಳಮ್ಮ ಜಕ್ಕಾ ನಗರಸಭೆ ಸದಸ್ಯರಾದ ಸುರೇಶ ಜಂಗ್ಲಿ, ಆಪ್ರೀನ್ ಸೋನಾರ, ನಜ್ಮಾ ಬನ್ನಿಗೋಳ, ಕಾಂಗ್ರೆಸ್ ಮುಖಂಡರಾದ ಅಬ್ದುಲ್ ರಜಾಕ ತಟಗಾರ, ವೆಂಕಟೇಶ ಸಾಕಾ, ವಿಜಯ ಮಹಾಂತೇಶ ಗದ್ದನಕೇರಿ ಬಸವರಾಜ ಜಾಲಿಹಾಳ ಇತರರು ಸುದ್ದಿಗೋಷ್ಠಿಯಲ್ಲಿ ಇದ್ದರು.

# ಶ್ರೀ ಕೃಷ್ಣನ ಧರ್ಮ ಸಂದೇಶಗಳು ಸರ್ವಕಾಲಿಕವಾದವು: ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ

**ಧಾರವಾಡ :** ಕೃಷ್ಣನು ಮಹಾಭಾರತ ಯುದ್ಧದಲ್ಲಿ ಧರ್ಮದ ಹಾದಿಯಲ್ಲಿ ನಡೆಯುವ ಪಾಂಡವರ ಪರವಾಗಿ ನಿಂತು ಉತ್ತಮ ಸಂದೇಶಗಳನ್ನು ನೀಡಿದ್ದಾನೆ. ಅಂತಹ ಧರ್ಮ ಸಂದೇಶಗಳು ಸರ್ವಕಾಲಿಕವಾದವುಗಳಾಗಿದ್ದು, ಇಂದಿನ ಸಮಾಜ ಅನುಸರಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ ಅವರು ಹೇಳಿದರು.

ಅವರು ಇಂದು ಬೆಳಿಗ್ಗೆ ನಗರದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಆಯೋಜಿಸಲಾದ ಭಗವಾನ ಶ್ರೀ ಕೃಷ್ಣ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು. ನಾವು ಹಿಂದಿನ ಕಾಲದ ಪದ್ಧತಿಗಳನ್ನು ಈಗಿನ ದಿನಮಾನಗಳಲ್ಲಿಯೂ ಸಹ ಪಾಲನೆ ಮಾಡುತ್ತಿದ್ದೇವೆ. ಸತ್ಯ ಹಾಗೂ ಧರ್ಮವನ್ನು ಅನುಸರಿಸುವ ಪಾಂಡವ ಅರ್ಜುನನ ಸಾರಥಿಯಾಗಿ ಧರ್ಮ ರಕ್ಷಣೆಯ ಪಾತ್ರವನ್ನು ಶ್ರೀ ಕೃಷ್ಣ ವಹಿಸಿದ್ದರು ಎಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದರು

ಇಂದಿನ ಸಮಯವನ್ನು ಕಳೆದುಕೊಂಡರೆ ಮುಂದಿನ ದಿನಮಾನಗಳಲ್ಲಿ ಅದು ಲಭಿಸುವುದಿಲ್ಲ. ಸಮಯಕ್ಕೆ ಅನುಸಾರವಾಗಿ ನಮ್ಮ ಜೀವನವನ್ನು ರೂಪಿಸಿಕೊಳ್ಳುತ್ತಾ ಸತ್ಯದ ಹಾಗೂ ಧರ್ಮದ ಹಾದಿಯಲ್ಲಿ ನಡೆಯಬೇಕು ಎಂದು ಅವರು ತಿಳಿಸಿದರು.

ನಿವೃತ್ತ ಶಿಕ್ಷಕ ಎಚ್.ಪರಮೇಶ್ವರ??ಪ ಅವರು ವಿಶೇಷ ಉಪನ್ಯಾಸವನ್ನು ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿರು.

ಯಾದವ ಸಮಾಜದ ಮುಖಂಡರಾದ ಮಹಾದೇವ ದಂಡಿನ, ಕಾಕಾ ರಂಗಸ್ವಾಮಿ, ಗುರುನಾಥ ಹುಲಗೂರ, ನೇತ್ರಾವತಿ ಗೊಲ್ಲರ, ಸಂತೋಷ ಹಂಚಾಟೆ ಹಾಗೂ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜಯಂತಿ ಕಾರ್ಯಕ್ರಮದಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ವಿದ್ಯಾ ಅಭ್ಯಾಸ ಜೋತೆಗೆ ವೃತ್ತಿಗಳ ಕಡೆಗೊ ಗಮನ ವಿರಲಿ: ಡಾ. ನಾಲತವಾಡ




**ಧಾರವಾಡ :** ಸ್ಥಳೀಯ ಹಜರತ್ ನಿಜಾಮುದ್ದೀನ್ ಪ್ರೌಢಶಾಲೆ ಹಾಗೂ ಅಸೋಸಿಯೇಷನ್ ಆಫ್ ಮುಸ್ಲಿಂ ಪ್ರೊಫೆಷನಲ್ಸ್ ಆಯೋಜಿಸಲಾದ ಒಂದು ದಿನದ ವೃತ್ತಿ ಮಾರ್ಗದರ್ಶನದ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಯಾಗಿ ಡಾ ಎನ್ ಬಿ ನಾಲತವಾಡ ವಿದ್ಯಾರ್ಥಿಗಳನ್ನು ಕರೆ ನೀಡಿದರು. ವಿದ್ಯಾರ್ಥಿಗಳು ತಮ್ಮ ಅಭ್ಯಾಸದ ಜೊತೆಯಲ್ಲಿ ವಿವಿಧ ವೃತ್ತಿಗಳ ಬಗ್ಗೆ ಗಮನ ವಿರಬೇಕು ಎಂದು ನುಡಿ-ದರು. ಸಂಪನ್ಮೂಲ ವ್ಯಕ್ತಿಯಾದ ಶ್ರೀ ಮೊಹಮ್ಮದ್ ಅಫ್ಜಲ್ ಸೌನೂರ್ ಏ ಎಂ ಪಿ ಯ ದೇಹ ಉದ್ದೇಶ ಬಗ್ಗೆ ಸಂಕ್ಷಿಪ್ತವಾದ ಮಾಹಿತಿ ಹೇಳಿ ವೈದ್ಯಕೀಯ ವಿಭಾಗದಲ್ಲಿರುವ ವೃತ್ತಿ ಅವಕಾಶಗಳ ಬಗ್ಗೆ ವಿವರಿಸಿದರು. ಡಾ. ಮುಸದ್ದಿಕಾ ಖಾನಂ ಕಿತ್ತೂರ್, ಮಾನಸಿಕ ಸಂತೋಲನ ಹಾಗೂ ವಿದ್ಯಾಭ್ಯಾಸದ ಕುರಿತು ಅಮೂಲ್ಯವಾದ ಮಾಹಿತಿ ನೀಡಿದರು, ಇನ್ನೋರ್ವ ಸಂಪನ್ಮೂಲ ವ್ಯಕ್ತಿಯಾದ ಶ್ರೀ ಅಫ್ತಾಬ್ ಅತ್ತಾರ್, ಸ್ವಡಿ ಟೆ-ಕ್ನಿಕ್ಸ್ ಎಂಬ ವಿಷಯದ ಮೇಲೆ ಸಮಗ್ರವಾದ ಮಾಹಿತಿ ನೀಡಿ-ದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಸಂಸ್ಥೆಯ ಉಪಾಧ್ಯಕ್ಷ ಇಸ್ಮಾಯಿಲ್ ತಾಡಪತ್ತರಿ, ಎ ಎಂ ಪಿ ವತಿಯಿಂದ ಬಂದಂತಹ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಧನ್ಯವಾದಗಳು ವ್ಯಕ್ತ ಪಡಿಸಿ ಇಂಥ ಕಾರ್ಯಕ್ರಮಗಳು ಮೇಲಿಂದ ಮೇಲೆ ಆಗುತ್ತಾ ಇರಬೇಕು ಎಂದು ಅಭಿಪ್ರಾಯಪಟ್ಟರು. ಶಾಲೆಯ ಮುಖ್ಯಾಧ್ಯಾಪಕರಾದ ಸಿರಾಜ್ ಅಹಮದ್ ಮನಿಯಾರ ಅತಿಥಿಗಳನ್ನು ಸ್ವಾಗತಿಸಿ ಪರಿಚಯಿಸಿದರು, ಶ್ರೀಮತಿ ಕಲಾಸಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ, ಸಾಧಕರ ಸನ್ಮಾನ



**ರಾಮದುರ್ಗ :** ವೀರಶೈವ ಲಿಂಗಾಯತ ಒಳಪಂಗಡಗಳು ಆಯಾ ಸಮಾಜದ ಪ್ರತಿಭಾವಂತರಿಗೆ ಹಾಗೂ ಸಾಧಕರಿಗೆ ಪ್ರೋತ್ಸಾಹಿಸಲು ಮತ್ತು ಸರ್ಕಾರಿ ಸೌಲಭ್ಯಕ್ಕಾಗಿದ್ದರೂ ಸಹಿತ ಲಿಂಗಾಯತ ಸಮಾಜವನ್ನು ಒಟ್ಟಾಗಿ ತೆಗೆದುಕೊಂಡು ಹೋಗಲು ಇರತ್ತದೆ ಹೊರತು ಮತ್ತೊಂದು ಸಮಾಜದೊಂದಿಗೆ ಸಂಘರ್ಷಕ್ಕಾಗಿ ಅಲ್ಲ ಎಂದು ಮಾಜಿಮುಖ್ಯಮಂತ್ರಿ, ಸಾಂಸದ ಜಗದೀಶ ಶೆಟ್ಟರ ಹೇಳಿದರು.

ಪಟ್ಟಣದ ಬಸವ ಗಾರ್ಡನ್‌ನಲ್ಲಿ ಕರ್ನಾಟಕ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ತಾಲೂಕಾ ಘಟಕ ಆಯೋಜಿಸಿದ್ದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ, ಸಾಧಕರ ಸನ್ಮಾನ ಮತ್ತು ನೂತನ ಸಂಸದರಿಗೆ ಏರ್ಪಡಿಸಿದ್ದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ಕಾರ್ಯಕ್ರಮ ಉದ್ಘಾಟಿಸಿದ ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಮಾತನಾಡಿ ಲಿಂಗಾಯತ ಒಳ ಪಂಗಡಗಳು ಕೇವಲ ಸಮಾವೇಶ, ಸಭೆ ಸಮಾರಂಭ ಮಾಡದೇ ಸಮಾಜದಲ್ಲಿ ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಜನರನ್ನು ಗುರ್ತಿಸಿ ಮುಖ್ಯವಾಹಿನಿಗೆ ತರಲು ಶ್ರಮಿಸಿದರೆ ಮಾತ್ರ ಬಸವಣ್ಣನವರ ಸಮ ಸಮಾಜ ನಿರ್ಮಾಣ ಸಾಧ್ಯವೆಂದು ಹೇಳಿದರು.

ತಾಳಿಕೋಟಿಯ ಪ್ರೌಢಶಾಲಾ ಶಿಕ್ಷಕ ಅಶೋಕ ಹಂಚಳಿ ಉಪನ್ಯಾಸ ನೀಡಿದರು. ತಾಲೂಕಾ ಘಟಕದ ಅಧ್ಯಕ್ಷ ಗುರುಸಿದ್ಧಪ್ಪ ಮುತ್ತೂರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಮಹಾದೇವಪ್ಪ ಯಾದವಾಡ, ಮಹಿಳಾ ಘಟಕದ ಅಧ್ಯಕ್ಷೆ ಪ್ರಭಾವರಿ ಪುಠಾಣಿ, ಯುವ ಘಟಕದ ಅಧ್ಯಕ್ಷ ರಾಜು ಬೆಂಬಳಗಿ, ಗೋಕಾಕದ ಹರ್ಷಿತಾ ಸವಣೂರ ಇದ್ದರು.

ಮಹೇಶ ದೇಶನೂರ, ಶೇಖರಪ್ಪ ಯಾದವಾಡ, ಬಸವಣ್ಣೆಪ್ಪ ಹುದ್ದಾರ, ಶಶಿಧರ ಮಾಳವಾಡ ಇವರಿಗೆ ಕಾಯಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು. ಪ್ರಧಾನಕಾರ್ಯದರ್ಶಿ ಈರಣ್ಣ ಬುಡ್ಡಾಗೋಳ ಸ್ವಾಗತಿಸಿದರು. ಪ್ರೋ. ಎಸ್. ಎಂ. ಸಕ್ರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ದಿವ್ಯಾ ಬಟಕುರ್ಕಿ ನಿರೂಪಿಸಿದರು. ಸಿದ್ದು ಹದ್ಲಿ ವಂದಿಸಿದರು.

## "ಅಮೃತಸರದಲಿ ಓಂಕಾರ ಚೆನ್ನ"




**ಅಧಿಕಾರ ಹಸ್ತದ ಅರಿವು ಅಂದ**
**ಸಹಪಾಠಿ ಮಮಕಾರ ಬಹು ಚಂದ**
**ಕಾಯಕದ ಕರ ಸಹಕಾರ ಉತ್ತಮ**
**ಸಾಹುಕಾರ ಸಿರಿತನದಲಿ ಆಹಾಕಾರ**
**ಅಹಂಕಾರ ಬೇಡ ಮಮಕಾರ ಚೆನ್ನ**
**ಬಾಳ ಪಯಣದಲಿ ಗುರಿಕಾರ ಸುಖಕರ**
**ಕರದಲಿ ಕಾರ ಬಂದಾಗ ಹಿತಕರ**
**ಮಧುಕರ ಚಮತ್ಕಾರ ಅಮೃತ ಕರ**
**ಓಂಕಾರ ಚೆನ್ನ ಅದೃಷ್ಟ ಕರ**
**ಪವಾಡ ಶುಭಕರ ಸದಾ ಶ್ರೀಕರ**
**ಜೀವನ ಪ್ರತಿಕ್ಷಣ ಮಧುರಕರ**



**ದೇಶಂಸು**
**ಶ್ರೀ ಸುರೇಶ ಶಂಕ್ರೆಪ್ಪ ಅಂಗಡಿ**
**ಆರೋಗ್ಯ ನಿರೀಕ್ಷಣಾಧಿಕಾರಿ**
**ಬಾಗಲಕೋಟೆ.**

# ಅಬುಬಕರ ಹಾಜಿಂಸಾಬ ಜಮಖಂಡಿ ನಿಧನ



**ಜಮಖಂಡಿ :** ನಗರದ ಮೈಗೂರ ರಸ್ತೆಯಲ್ಲಿನ ದರ್ಗಾಕಾಲನಿ ನಿವಾಸಿ, ಅಬಕಾರಿ ಇಲಾಖೆಯ ನಿವೃತ್ತ ಉಪ ಅಧೀಕ್ಷಕರಾದ ಅಬುಬಕರ ಹಾಜಿಂಸಾಬ ಜಮಖಂಡಿ (80) ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

# ರನ್ನಬೆಳಗಲಿ ಪಪಂ ಬಿಜೆಪಿ ಮಡಿಲಿಗೆ: ಕಾರ್ಯಕರ್ತರ ವಿಜಯೋತ್ಸವ



**ಮಹಾಲಿಂಗಪುರ :** ಮಂಗಳವಾರ ಜರುಗಿದ ರನ್ನಬೆಳಗಲಿ ಪಪಂ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಯಲ್ಲಿ ಬಿಜೆಪಿ ಪಕ್ಷದಿಂದ ಅಧ್ಯಕ್ಷರಾಗುತ್ತಿದ್ದಂತೆ ಸಂಸದ ಪಿ.ಸಿ.ಗದ್ದಿಗೌಡರ ಸಮ್ಮುಖದಲ್ಲಿ ಮುಧೋಳ ತಾಲೂಕಾ ಬಿಜೆಪಿ ಮುಖಂಡರು, ಬಿಜೆಪಿ ಪಪಂ ಸದಸ್ಯರು, ನೂರಾರು ಕಾರ್ಯಕರ್ತರು, ಸ್ಥಳೀಯ ಮುಖಂಡರು ನೂತನ ಅಧ್ಯಕ್ಷರೊಂದಿಗೆ ಬಂದಲಕ್ಷ್ಮೀ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ನಂತರ ಪಟ್ಟಣದಲ್ಲಿ ಪಟಾಕಿ ಸಿಡಿಸಿ, ಕೇಸರಿ ಬಣ್ಣ ಎರಚಿಕೊಂಡು ವಿಜಯೋತ್ಸವ ಆಚರಿಸಿದರು.

ಸಂಸದ ಪಿ.ಸಿ.ಗದ್ದಿಗೌಡರ ಮಾತನಾಡಿ ಇಂದು ರನ್ನಬೆಳಗಲಿ ಪಪಂ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ರೂಪಾ ಸದಾಶಿವ ಹೊಸಟ್ಟಿ, ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆಯಾದ ಸಹನಾ ಸಿದ್ದು ಸಾಂಗ್ಲೀಕರ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಪಕ್ಷದ ಮುಖಂಡರು, ಪಪಂನ ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಟ್ಟಣದ ಅಭಿವೃದ್ದಿಗಾಗಿ ಶ್ರಮಿಸಿ, ಜನಸಾಮಾನ್ಯರ ಕೆಲಸಗಳಿಗೆ ತ್ವರೀತವಾಗಿ ಸ್ಪಂದಿಸುವದರ ಜೊತೆಗೆ ರಾಜಕೀಯ ಮತ್ತು ಸಾಮಾಜಿಕವಾಗಿ ತಾವು ಬೆಳವಣಿಗೆ ಆಗಿರಿ ಎಂದು ಶುಭ ಹಾರೈಸಿದರು.

ಚುನಾವಣಾ ಪ್ರಕ್ರೀಯೆಯಲ್ಲಿ ಭಾಗವಹಿಸಿ ತೆರಳಿದ ಜಿಲ್ಲಾ ಉಸ್ತುವಾರಿ ಸಚಿವರಾದ ಆರ್.ಬಿ.ತಿಮ್ಮಾಪೂರ ಮಾತನಾಡಿ ಸ್ಪರ್ಧೆ ಅಂದ ಮೇಲೆ ಸೋಲು ಗೆಲುವು ಸಹಜ. ನಮ್ಮ ಪಕ್ಷದ ಇಬ್ಬರು ಸದಸ್ಯರು ಬಿಜೆಪಿಗೆ ಬೆಂಬಲಿಸಿದ್ದರಿಂದ ನಮ್ಮ ಪಕ್ಷಕ್ಕೆ ರನ್ನಬೆಳಗಲಿ ಪಪಂ ಅಧ್ಯಕ್ಷ ಚುನಾವಣೆಯಲ್ಲಿ ಹಿನ್ನಡೆಯಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸೋಲುಗೆಲುವು ಸ್ವಾಭಾವಿಕ ಎಂದರು.

ಬಿಜೆಪಿಗೆ ಬೆಂಬಲಿಸಿದ ಸಹನಾ ಸಿದ್ದು ಸಾಂಗ್ಲೀಕರ, ದ್ರಾಕ್ಷಾಯಣಿ ಮಹಾದೇವ ಮುರನಾಳ ಅವರು ಬಿಜೆಪಿ ವಿಜಯೋತ್ಸವದಲ್ಲಿ ಭಾಗವಹಿಸಿರಲಿಲ್ಲ. ನಂತರ ಬಿಜೆಪಿ ತಾಲೂಕಾ ಮತ್ತು ಸ್ಥಳೀಯ ಮುಖಂಡರು ಉಪಾಧ್ಯಕ್ಷೆ ಸಹನಾ ಸಾಂಗ್ಲೀಕರ ಮನೆಗೆ ತೆರಳಿ ಸನ್ಮಾನಿಸಿ ಗೌರವಿಸಿದರು.

# ನೀರಿಗಾಗಿ ಸಾಮ್ರಾಜ್ಯಗಳು ಮುಳಗಿ ಹೋಗಿವೆ: ಅಮರೇಗೌಡ



**ಜಮಖಂಡಿ :** ನಮ್ಮ ಸಂಸ್ಕೃತಿಯ ಮೇಲೆ ವಿಶ್ವ ಸುಭದ್ರ ರೀತಿಯಲ್ಲಿ ಬದುಕುಬಹುದು. ನೀರಿಗಾಗಿ ಸಾಮ್ರಾಜ್ಯಗಳು ಸಾಕಷ್ಟು ಮುಳುಗಿ ಹೋಗಿದ್ದು, ಹೊಸ ಸಾಮ್ರಾಜ್ಯಗಳು ಉದಯವಾಗಿವೆ ಎಂದು ಉದಯವಾಣಿ ಪತ್ರಿಕೆಯ ಅಂಕಣಕಾರ ಅಮರೇಗೌಡ ಗೋನವಾರ ಹೇಳಿದರು.

ತಾಲೂಕಿನ ಹಿಪ್ಪರಗಿ ಸಂಗಮೇಶ ದೇವಸ್ಥಾನದ ಸಭಾಭವನದಲ್ಲಿ ಕೃಷ್ಣಾಷ್ಟಮಿ ನಿಮಿತ್ತ ಮಾಜಿ ಸಚಿವ ಮುರಗೇಶ ನಿರಾಣಿಯವರ ಹುಟ್ಟುಹಬ್ಬ ಆಚರಣೆ ಮತ್ತು ಕೃಷ್ಣಾನದಿಗೆ ಕೃಷ್ಣಾರತಿ ಕಾರ್‍ಯಕ್ರಮದ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು.

ಕೃಷ್ಣನದಿ ದಡದಲ್ಲಿ ಬದಕು ಕಟ್ಟಿಕೊಂಡಿರುವ ಕುಟುಂಬ ನಿರಾಣಿಯವರದು ಈ ಭಾಗದ ರೈತರ ಮೇಲೆ ಅಪಾರ ಪ್ರೀತಿ ಹೊಂದಿದ್ದಾರೆ. ಎಲ್ಲೋ ಹುಟ್ಟಿ ಇನ್ನೆಲ್ಲೋ ಹರಿವ ನದಿ ತನ್ನದೇಯಾದ ಗುಣಗಳನ್ನು ಹೊತ್ತು ತರುತ್ತದೆ. ನದಿಯನ್ನು ಪೂಜಿಸುವ ಸಂಸ್ಕೃತಿ ನಮ್ಮದು. ಇಂತಹ ನದಿಗಳಲ್ಲಿ ಕೃಷ್ಣ ನದಿಯು ಪ್ರಾಮುಖ್ಯತೆ ಪಡೆದಿದ್ದು ಅಂತಹ ನದಿಗೆ ಕೃಷ್ಣಾರತಿ ನಡೆಯುತ್ತಿರುವದು ಮಹತ್ವದ ಕೆಲಸವಾಗಿದೆ ಎಂದರು.

ಮಹಾರಾಷ್ಟ್ರದಲ್ಲಿ ಹುಟ್ಟಿ, ಕರ್ನಾಟಕದಲ್ಲಿ ಹರಿದು, ಆಂದ್ರಪ್ರದೇಶದ ಮೂಲಕ ಸಾಗುವ ಕೃಷ್ಣಾನದಿ ನಮ್ಮೆಲ್ಲರಿಗೂ ಸಾಂಸ್ಕೃತಿಕ ಬದುಕು ಕಟ್ಟಿಕೊಟ್ಟಿದೆ. 12 ಸಾವಿರ ಅಡಿವರೆಗೆ ಹರಿಸುವ ಕೃಷ್ಣಾನದಿ ನದಿತೀರದ ಜನರಿಗೆ ಆರ್ಥಿಕ ಶಕ್ತಿ ಆಗಿ ಗುರುತಿಸಿಕೊಂಡಿದ್ದಾಳೆ. ನಮ್ಮೆಲ್ಲರ ಬದುಕು ರೂಪಿಸಿರುವ ಕೃಷ್ಣಾನದಿಗೆ ಗೌರವ ಅರ್ಪಣೆ ಅಗತ್ಯವಾಗಿದೆ. ಪ್ರಸಕ್ತ ನಡೆಯುತ್ತಿರುವ ಕೃಷ್ಣಾರತಿ ಕಾರ್ಯಕ್ರಮ ನಿರಂತವಾಗಿ ನಡೆಯಲಿ ಎಂದರು.

ವೇದಿಕೆಯಲ್ಲಿ ಹುಕ್ಕೇರಿ ಹಿರೇಮಠದ ಗುರುಶಾಂತೇಶ್ವರ ಶಿವಾಚಾರ್ಯರು, ಹಿಪ್ಪರಗಿ ಸಂಗಮೇಶ್ವರ ದೇವಸ್ಥಾನದ ಪ್ರಭುಜೀ ಬೆನ್ನಾಳೆ, ಪರಾಮಪೂಜ್ಯ ಮಾಹಾದೇವ ಶಿವಾಚಾರ್ಯರು, ರುದ್ರಾವಧುತ ಮಠದ ಸಹಜಾನಂದ ಅವಧೂತರು, ಮುತ್ತಿನಕಂತಿಮಠದ ಶಿವಲಿಂಗ ಶಿವಾಚಾರ್ಯರು, ಹುಲ್ಯಾಳದ ಹರ್ಷನಂದಶ್ರೀ, ಎಂ.ಆರ್.ಎನ್. ನಿರಾಣಿ ಪೌಂಡೇಶನ್ ಕಾರ್ಯನಿರ್ವಾಹಕ ಸಂಗಮೇಶ ನಿರಾಣಿ ಸಹಿತ ಹಲವರು ಇದ್ದರು.



## ಗುಜರಾತಿ ಸಮಾಜದವರಿಂದ ಕೃಷ್ಣಜನ್ಮಾಷ್ಟಮಿ

**ಮಹಾಲಿಂಗಪುರ: ಪಟ್ಟಣದ ಗುಜರಾತಿ ಪಾಟೀದಾರ ಸಮಾಜದ ಮಹಿಳೆಯರು, ಮಕ್ಕಳು ಸೋಮವಾರ ಕೃಷ್ಣಜನ್ಮಾಷ್ಟಮಿ ಆಚರಿಸಿದರು.**

### "ಅನ್ವಿಕ್ಷಿಕಿ–2024 ರಾಷ್ಟ್ರೀಯ ಕಾರ್ಯಾಗಾರ"

# ತಂತ್ರಜ್ಞಾನದ ಯುಗದಲ್ಲಿ ವೈಜ್ಞಾನಿಕ ಬರವಣಿಗೆ ಮುಖ್ಯ: ಡಾ.ಬಿ.ಎಸ್.ಪ್ರಸಾದ



**ಬಾಗಲಕೊಟೆ:** ತಂತ್ರಜ್ಞಾನದಯುಗದಲ್ಲಿವೈಜ್ಞಾನಿಕಬರವಣಿಗೆಗಳು ಅಗತ್ಯವಾಗಿದ್ದು ಅವು ಮುಂದಿನ ಪಿಳಿಗೆಗೆ ಜ್ಞಾನ ನೀಡಲಿ ಎಂದು ನವದೆಹಲಿಯ ಆಯುರ್ವೇದ ಪರಿಷತ್ ಅಧ್ಯಕ್ಷರಾದ ಡಾ. ಬಿ.ಎಸ್.ಪ್ರಸಾದ ಹೇಳಿದರು.

ಅವರು ಬಿ.ವ್ಹಿ.ವ್ಹಿ.ಎಸ್. ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯಲ್ಲಿ ಏರಡು ದಿನಗಳ ಕಾಲ ಹಮ್ಮಿಕೊಂಡಅನ್ವಿಕ್ಷಿಕಿ–2024ರಾಷ್ಟ್ರೀಯಕಾರ್ಯಾಗಾರದಮುಖ್ಯ ಭಾಷಣಕಾರರಾಗಿ ಆನ್‌ಲೈನ್ ವರ್ಚುವಲ್ಲನಲ್ಲಿ ಮಾತನಾಡಿದರು. ಲೇಖನದ ಬೌದ್ಧಿಕ ಗುಣಮಟ್ಟವು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಆದರೂ, ಇದು ಕೇವಲ ವೈಯಕ್ತಿಕ ಲೇಖನಗಳ ಗುಣಮಟ್ಟದ ಬಗ್ಗೆ ಅಲ್ಲ. ತಲುಪುವಿಕೆ, ಓದುವಿಕೆ, ವಿತರಣೆ, ಸಾಮಾಜಿಕ ಪರಿಣಾಮ ಮತ್ತು ಉಲ್ಲೇಖಗಳಂತಹ ಅಂಶಗಳು ಸಹ ಮಹತ್ವದ ಪಾತ್ರವನ್ನು ವಹಿಸುತ್ತವೆ, ಅತ್ಯಂತ ಮಹೋನ್ನತ ಸಂಶೋಧನೆಯು ಸಹ ಸೀಮಿತ ಓದುಗರ ಪರಿಮಿತಿಯೊಳಗೆ ಮರೆಯಾಗಿ ಉಳಿಯದೆ ಎಲ್ಲರಿಗೂ ತಲುಪುವಂತಾಗಬೇಕು, ನಮ್ಮ ವೃತ್ತಿಯಲ್ಲಿನೂತನಯಶಸ್ವಿಚಿಕಿತ್ಸಾವಿಧಾನಗಳನ್ನುಬರವಣಿಗೆಯಲ್ಲಿ ತರುವುದರಿಂದ ಮುಂದಿನ ಪಿಳಿಗೆಗೆ ಸಂಶೋಧನಾತ್ಮಕ ಜ್ಞಾನ ಹೊಂದಲು ಸಹಕಾರಿಯಾಗಿತ್ತದೆ ಎಂದರು.

ಡಾ. ಸುಹಾಸಕುಮಾರ ಶೆಟ್ಟಿ ಕೆ.ಎಲ್.ಇ ಸಂಸ್ಥೆಯ ಬಿ.ಎಮ್. ಕಂಕಣವಾಡಿ ಆಯುರ್ವೇದ ಮಹಾ ವಿದ್ಯಾಲಯದ ಪ್ರಾಚಾರ್ಯ ಡಾ.ಸುಹಾಸಕುಮಾರ ಶೇಟ್ಟಿ ರಾಷ್ಟ್ರೀಯ ಕಾರ್ಯಾಗಾರವನ್ನು ಉಧ್ಘಾಟಿಸಿ,ಬಾಲಜೀವನಮ್ 2.0ರಾಷ್ಟ್ರೀಯವಿಚಾರಸಂರ್ಕಿಣದ ಕೈಪಿಡಿಯನ್ನು ಬಿಡುಗಡೆಗೊಳಿಸಿದರು,

ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ

ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಆಡಳಿತ ಮಂಡಳಿಅಧ್ಯಕ್ಷರಾದಮಲ್ಲಿಕಾರ್ಜುನಎಸ್.ಸಾಸನೂರರಾಷ್ಟ್ರೀಯ ಕಾರ್ಯಾಗರದ ಸದುಯಿಯಿಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಲಿ ಎಂದರು.

ಪ್ರಭಾರಿ ಪ್ರಾಚಾರ್ಯರಾದ ಡಾ. ಎಮ್. ಎಸ್. ಹಿರೇಮಠ ಇವರು ಬಿ.ವ್ಹಿ.ವ್ಹಿ.ಎಸ್. ಆಯುರ್ವೇದ ಮಹಾವಿದ್ಯಾಲಯದ 25 ವರ್ಷಗಳ ಬೆಳವಣಿಗೆ ಹಾಗೂ ಅಭಿವೃದ್ಧಿಯ ಕುರಿತು ಪ್ರಸ್ತಾವಿಕವಾಗಿ ಮಾತನಾಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಸುಹಾಸಕುಮಾರ ಶೆಟ್ಟಿ, ಡಾ. ಅಭಿಷೇಕ, ಡಾ. ಅನಿತಾ ಡಿ, ಡಾ. ಪ್ರಿಯಾಂಕ ಬೈರಾಗಿ ವೈಜ್ಞಾನಿಕ ಬರವಣಿಗೆಯನ್ನು ವಿವರವಾಗಿ ತರಬೇತಿ ನೀಡಿದರು.

ವಿವಿಧ ಆಯರ್ವೇದ ಮಹಾವಿದ್ಯಾಲಯಗಳಿಂದ ನೂರಕ್ಕೂ ಅಧಿಕ ಉಪನ್ಯಾಸಕರು, ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ಪದವಿ ವಿದ್ಯಾರ್ಥಿಗಳು, ಮಹಾವಿದ್ಯಾಲಯದ ಎಲ್ಲಾ ಭೋಧಕ ವೃಂದದವರು ಭಾಗವಹಿಸಿದ್ದರು. ಉಪಸ್ಥಿತರಿ ದ್ದರು.

ಡಾ. ವ್ಹಿ. ಎಸ್. ಚೌಧರಿ ಸ್ವಾಗತಿಸಿದರು. ಡಾ. ಪ್ರಮೋದಕುಮಾರ ಎನ್. ಕಾರ್ಯಕ್ರಮವನ್ನು ನಿರೂಪಿಸಿದರೆ, ಡಾ. ಪಲ್ಲವಿ. ಹೆಗಡೆ ವಂದಿಸಿದರು.

## ಜಾತ್ರೆಗೆ ಜಾತಿ ಇಲ್ಲ–ಶಿವಲಿಂಗ ಶಿವಾಚಾರ್ಯರು



**ರಬಕವಿ ಬನಹಟ್ಟಿ :** ಜಾತ್ರೆಗೆ ಹಾಗೂ ಉತ್ಸವಗಳಿಗೆ ಜಾತಿ ಇಲ್ಲ. ಎಲ್ಲರೂ ಒಂದಾಗಿ ಭಾಗವಹಿಸಿದರೆ ಸೌಹಾರ್ದತೆ ಹಾಗೂ ಬಾಂಧವ್ಯ ಬಲಗೊಳ್ಳುತ್ತದೆ ಎಂದು ಜಮಖಂಡಿಯ ಮುತ್ತಿನಕಂತಿ ಮಠದ ಶಿವಲಿಂಗ ಶಿವಾಚಾರ್ಯರು ಹೇಳಿದರು. ಅವರು ತಾಲೂಕಿನ ನಾವಲಗಿ ಗ್ರಾಮದ ನಾವಲಗಿ – ಕಲಹಳ್ಳಿ ಸೀಮೆಯಲ್ಲಿರುವ ಶ್ರೀ ಲಕ್ಕವ್ವ ದೇವಿಯ ಜಾತ್ರಾ ಮಹೋತ್ಸವದ ಸಮಾರಂಭದ ಪ್ರಯುಕ್ತ ವೆಂಕಟೇಶ್ವರ ಏತ ನೀರಾವರಿಗೆ ಬಾಗಿನ ಅರ್ಪಿಸುವ ಮೂಲಕ ಜಾತ್ರೆಗೆ ಚಾಲನೆ ನೀಡಿದರು. ಈ ಭಾಗದ ರೈತರು ಸೇರಿಕೊಂಡು ಪ್ರತಿ ವರ್ಷ ದೇವಿಯ ಜಾತ್ರೆಯನ್ನು ಆಚರಿಸಿಕೊಂಡು ಬರುತ್ತಿರುವುದು ಸಂತಸದ ಸಂಗತಿ.

ಇಂತಹ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಮೂಲಕ ಧರ್ಮದ ಹಾದಿಯಲ್ಲಿ ನಡೆದರೆ ಮಾತ್ರ ಮುಕ್ತಿ ಸಿಗುತ್ತದೆ ಎಂದರು. ನಂತರ ತೇರದಾಳದ ಗಂಗಾಧರ ಶ್ರೀಗಳು ಮಾತನಾಡಿ ಈ ಭಾಗದ ರೈತರಿಗೆ ವೆಂಕಟೇಶ್ವರ ಏತ ನೀರಾವರಿಯಿಂದ ಬಹಳಷ್ಟು ಅನುಕೂಲವಾಗಿದೆ. ನೀರು ಅಮೃತಕ್ಕೆ ಸಮಾನ. ಆದ್ದರಿಂದ ನೀರನ್ನು ಅನಾವಶ್ಯಕವಾಗಿ ಪೋಲು ಮಾಡದೆ ಅದರ ಉಪಯೋಗ ಮಾಡಿಕೊಳ್ಳಿ ಎಂದರು.

ಈ ಸಂದರ್ಭದಲ್ಲಿ ರೈತ ಸಂಘದ ತಾಲೂಕಾಧ್ಯಕ್ಷ ಹಣಮಂತ ಮಗದುಮ್, ದಾನಪ್ಪ ಅಸಂಗಿ, ಮಲ್ಲಪ್ಪ ಮಗದುಮ್, ಈರಪ್ಪ ವಾಲಿ, ಮುತ್ತಪ್ಪ ಅಂಗಡಿ, ಗಿರೀಶ ಪಟ್ಟಣಶೆಟ್ಟಿ, ಶಿವಪ್ಪ ವಾಲಿ, ಬಸವರಾಜ ಗಣಿ, ಗಿರಮಲ್ಲ ಮಗದುಮ್, ಈರಪ್ಪ ಮಗದುಮ್, ದುಂಡಪ್ಪ ಕಾಂತಿ, ಚನ್ನಬಸು ಕಂಚು, ಹಣಮಂತ ಕಂಚು, ಬುಜಬಲಿ ಶಿರಹಟ್ಟಿ, ಧನಪಾಲ್ ಶಿರಹಟ್ಟಿ, ಶಿವಪ್ಪ ಮಗದುಮ್, ಅಕ್ಷಯ ಮೇತ್ರಿ ಶಿವಪ್ಪ ಮೇತ್ರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಸೋರಗಾಂವ ಮಾರುತೇಶ್ವರ ಕಬಡ್ಡಿ ತಂಡ ಪ್ರಥಮ





**ಬೀಳಗಿ :** ತಾಲೂಕಿನ ಅರಕೇರಿ ಗ್ರಾಮದ ಆರಾಧ್ಯ ದೈವ ಕೌದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಬಾಗಲಕೋಟ ಜಿಲ್ಲಾ ಅಸೋಷಿಯೆಷನ್, ಶ್ರೀ ನ್ಯೂ ಗುರುಲಿಂಗೇಶ್ವರ ಸ್ಪೋರ್ಟ್ಸ್ ್ ಕ್ಲಬ್ ಅರಕೇರಿ ಇವರ ಸಂಯುಕ್ತ ಆಶ್ರಯದಲ್ಲಿ 60 ಕೆ.ಜಿ. ಪ್ರೋ ಮಾದರಿಯ ರಾಜ್ಯ ಮಟ್ಟದ ಹೊನಲು ಬೆಳಕಿನ ಮ್ಯಾಟ್ ಕಬಡ್ಡಿ ಪಂದ್ಯಾವಳಿಗಳು ಜರುಗಿದವು.

ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದ ಸೋರಗಾಂವ ಮಾರುತೇಶ್ವರ ಕಬಡ್ಡಿ ತಂಡ 30 ಸಾವಿರ ರೂ,

ದ್ವಿತೀಯ ಸ್ಥಾನ ಪಡೆದ ಧಾರವಾಡ ಜಿಲ್ಲೆಯ ಮಮ್ಮಿಗಟ್ಟಿಯ ಬಂಜಾರ ಬುಲ್ಸ್ ಕಬಡ್ಡಿ ತಂಡ 20 ಸಾವಿರ ರೂ., ತೃತೀಯ ಸ್ಥಾನ ಪಡೆದ ತೆಗ್ಗಿ ಸೋಮಲಿಂಗೇಶ್ವರ ಕಬಡ್ಡಿ ತಂಡ 15 ಸಾವಿರ ರೂ., ಚತುರ್ಥ ಸ್ಥಾನ ಪಡೆದ ಅರಕೇರಿ ನ್ಯೂ ಗುರುಲಿಂಗೇಶ್ವರ ಕಬಡ್ಡಿ ತಂಡ 10 ಸಾವಿರ ರೂ. ಬಹುಮಾನಕ್ಕೆ ಭಾಜನವಾದವು.

ಶಿಕ್ಷಕ ಸಿದ್ದು ಬೂದಿಹಾಳ ಕಬಡ್ಡಿ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿ, ಆರೋಗ್ಯಕರ ದೇಹ ಮತ್ತು ಮನಸ್ಸಿಗೆ ಕ್ರೀಡೆಗಳು ಅತಿ ಮುಖ್ಯ. ಕ್ರೀಡೆಗಳು ಒತ್ತಡ ಮತ್ತುಆತಂಕವನ್ನು ಕಡಿಮೆ ಮಾಡಲು ಮತ್ತು ಸಕಾರಾತ್ಮಕ ಮನೋಭಾವವನ್ನು ಉತ್ತೇಜಿಸಲು ಸಹಾಯ ಮಾಡುತ್ತವೆ. ಕಬಡ್ಡಿ ಜನಪ್ರಿಯ ಕ್ರೀಡೆಯಾಗಿದ್ದು, ಪ್ರೋತ್ಸಾಹಿಸುವ ಮೂಲಕ ಉನ್ನತ ಸ್ಥಾನಕ್ಕೆ ಕೊಂಡೊಯ್ಯೋಣ ಎಂದು ಹೇಳಿದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಗೀತ ಮತ್ತು ಕ್ರೀಡೆಗಳು ಜಾತ್ಯಾತೀತ, ಧರ್ಮಾತೀತ ಮತ್ತು ಸೀಮಾತೀತವಾಗಿವೆ. ಮೇಲು–ಕೀಳು, ಬಡವ–ಬಲ್ಲಿದ ಎಂಬ ಬೇಧಭಾವ ಇಲ್ಲದೆ ಎಲ್ಲರೂ ಸಮಾನರೆಂದು ತಿಳಿದು ಭಾಗವಹಿಸುವರು.

ಕ್ರೀಡೆಗಳು ಹೊಂದಾಣಿಕೆ, ಆತ್ಮವಿಶ್ವಾಸ ಹೆಚ್ಚಿಸುತ್ತವೆ. ಜಾತ್ರೆ, ಉತ್ಸವಗಳಿಗೆ ಕ್ರೀಡೆ, ನಾಟಕಗಳು ಕಳೆ ಕಟ್ಟುತ್ತವೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ವಿ. ಬಿ. ಮಾಚಪ್ಪನವರ, ಜಿ. ಟಿ. ಬೆನಕಟ್ಟಿ, ಬಿ. ಎ. ಪಾಟೀಲ, ಕಲ್ಲಪ್ಪ ಆಲಗುಂಡಿ, ಹನಮಂತ ತೆಗ್ಗೆನ್ನವರ, ಹನಮಂತ ತಳವಾರ, ರಾಘವೇಂದ್ರ ಬೆನಕಟ್ಟಿ, ಅಜಿತ ಪಾಟೀಲ, ಪರಶು ಮಲ್ಲಾರ, ಪಾಂಡು ಬೆನಕಟ್ಟಿ, ಮಲ್ಲು ದುಲಾರಿ, ಲಕ್ಷ್ಮಣ ಗೊಣ್ಣಾಗರ, ಬಸಪ್ಪ ಬೂಷಣ್ಣವರ, ಅರಕೇರೆಪ್ಪ ಗಾಜನ್ನವರ, ರವಿ ಮೇತ್ರಿ, ಲಕ್ಷ್ಮಣ ಮಲ್ಲಾರ ಮತ್ತಿತರಿದ್ದರು.

ಶಿವನಗೌಡ ಪಾಟೀಲ ಸ್ವಾಗತಿಸಿದರು. ಮಳಿಯಪ್ಪ ನಾಯ್ಕರ, ಅಮಿತ ಕಮ್ಮನ್ನವರ ನಿರೂಪಿಸಿದರು. ಅಬ್ದುಲ್ ಜೀರಗಾಳ ವಂದಿಸಿದರು.

## ಅಧ್ಯಕ್ಷೆ–ಉಪಾಧ್ಯಕ್ಷೆ ಪದ ಗ್ರಹಣ
## ಪಕ್ಷಾತೀತವಾಗಿ ಅಭಿವೃದ್ಧಿಗೆ ಶ್ರಮಿಸಿ: ನಾಡಗೌಡ




**ತೇರದಾಳ :** ಇಲ್ಲಿನ ಪುರಸಭೆ ನೂತನ ಅಧ್ಯಕ್ಷತೆ ಶಿಲ್ಪಾ ಗೌತಮ ರೋಡಕರ ಉಪಾಧ್ಯಕ್ಷೆ ನಸ್ರಿನ್‌ಬಾನು ರಾಜೇಸಾಬ ನಗಾರ್ಜಿ ಬುಧವಾರ ಪದ ಗ್ರಹಣ ಮಾಡಿದರು.

ಈ ಸಂದರ್ಭದಲ್ಲಿ ನೂತನ ಅಧ್ಯಕ್ಷೆ–ಉಪಧ್ಯಾಕ್ಷೆಯರನ್ನು ಸನ್ಮಾನಿಸಿ ಮಾತನಾಡಿದ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಪ್ರವೀಣ ನಾಡಗೌಡ, ಮತಕ್ಷೇತ್ರದ ಕೇಂದ್ರ ಸ್ಥಾನ ಎನಿಸಿಕೊಂಡಿರುವ ತೇರದಾಳ ಪಟ್ಟಣದಲ್ಲಿಹಲವು ಸಮಸ್ಯೆಗಳಿದ್ದು, ಅವುಗಳ ಸಮಸ್ಯೆಗೆ ಆದ್ಯತೆ ನೀಡಿ. ಹಾಗೂ ಅಭಿವೃದ್ಧಿ ವಿಷಯದಲ್ಲಿ ಪಕ್ಷಾತೀತವಾಗಿ ನಡೆದುಕೊಳ್ಳುವ ಮೂಲಕ ಪಟ್ಟಣದ ಸೌಂದರ್ಯ ಹೆಚ್ಚಿಸುವ ಕ್ರಮ ಕೈಗೊಳ್ಳಿ ಎಂದು ಸಲಹೆ ನೀಡಿದರು. ಅಧ್ಯಕ್ಷೆ ಶಿಲ್ಪಾ ಗೌತಮ ರೋಡಕರ ಮಾತನಾಡಿ, ಮೊದಲು ಸ್ವಚ್ಛತೆಗೆ ಆದ್ಯತೆ ನೀಡಲಾಗುವುದು. ಅಧಿಕಾರಿ ಗಳು ಪುರಸಭೆಗೆ ಬರುವ ಸಾರ್ವಜನಿಕರ ಸಮಸ್ಯೆಗಳಿಗೆ ತಕ್ಷಣವೇ ಸ್ಪಂಧಿಸುವ ಕೆಲಸ ಮಾಡಬೇಕು. ವೃದ್ಧರು, ವಿಶೇಷಚೇತನರು ಬಂದಾಗ ಹೆಚ್ಚಿನ ಕಾಳಜಿ ವಹಿಸಬೇಕು. ಸಾರ್ವಜನಿಕರು ಪುರಸಭೆಗೆ ಸಂದಾಯ ಮಾಡುವ ಎಲ್ಲ ರೀತಿಯ ತೆರಿಗೆ ಹಣವನ್ನು ಬಾಕಿ ಇಟ್ಟುಕೊಳ್ಳದೆ ಪಾವತಿಸುವ ಮೂಲಕ ಅಭಿವೃದ್ಧಿಗೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು. ಮಾಜಿ ಅಧ್ಯಕ್ಷ ಹನಮಂತ ರೋಡನ್ನವರ, ಎಂ.ಕೆ. ತಹಸೀಲ್ದಾರ್, ಯೋಗೇಶ ರೋಡಕರ, ಸುರೇಶ ಕಬಾಡಗಿ, ಪಜಲ್ ಅತಾರಾವುತ್, ವಿಶ್ವನಾಥ ಹಿರೇಮಠ, ಮಹಾಂತೇಶ ಪಂಚಾಕ್ಷರಿ, ಅಜೀತ ಮಗದುಂ, ಪೈಜುಲ್ಲಾ ಇನಾಂದಾರ, ರುಸ್ತುಂ ನಿಪ್ಪಾನಿ, ಕುಮಾರ ಸರಿಕರ, ಕೇದಾರಿ ಪಾಟೀಲ, ಶಂಕರ ಕುಂಬಾರ, ಸಂಗಮೇಶ ಕಾಲತಿಪ್ಪಿ, ಪಿ.ಎಸ್. ಮಾಸ್ತಿ, ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ, ವ್ಯವಸ್ಥಾಪಕ ಮಲ್ಲಿಕಾರ್ಜುನ ಬಿರಾದಾರ ಪಾಟೀಲ, ಇನ್ನಿತರಿದ್ದರು.

## ಬನಹಟ್ಟಿಯ ಪ್ರಮುಖ ರಸ್ತೆಯ ಕಾಮಗಾರಿಗೆ ಸಿದ್ದು ಸವದಿ ಚಾಲನೆ



**ಬನಹಟ್ಟಿ :** ಇಲ್ಲಿನ ರಸ್ತೆ ಸಂಚಾರ ಸುಗಮವಾಗುವುದಕ್ಕಾಗಿಪಟ್ಟಣದ ಹೃದಯ ಭಾಗವಾಗಿರುವ ಎಂ.ಎಂ.ಬಂಗ್ಲೆಯಿಂದ ಓಕಳಿ ಹೊಂಡದವರೆಗೆ ಸಿ. ಸಿ. ರಸ್ತೆ ಕಾಮಗಾರಿಗೆ ಇಂದು ಚಾಲನೆ ನೀಡಲಾಗಿದೆ ಎಂದು ತೇರದಾಳ ಮತಕ್ಷೇತ್ರದ ಶಾಸಕ ಸಿದ್ದು ಸವದಿ ಹೇಳಿದರು.

ಇಲ್ಲಿನ ಮಂಗಳವಾರ ಪೇಟೆಯಲ್ಲಿ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ನಗರಸಭೆಯ ಹದಿನೈದನೇ ಹಣಕಾಸು ಯೋಜನೆಯ ಅಡಿಯಲ್ಲಿ 24.30 ಲಕ್ಷ ರೂ. ಗಳ ವೆಚ್ಚದಲ್ಲಿ ಈ ಕಾಮಗಾರಿ ನಡೆಸಲಾಗುತ್ತಿದ್ದು , ಮುಂದಿನ ದಿನಗಳಲ್ಲಿ ಮತ್ತಷ್ಟು ರಸ್ತೆ ಕಾಮಗಾರಿಗಳು ಪಟ್ಟಣದಾದ್ಯಂತ ನಡೆಯಲಿವೆ ಎಂದರು.

ನಗರಸಭೆಯ ಅಧ್ಯಕ್ಷೆ ಶ್ರೀಮತಿ ವಿದ್ಯಾ ದಭಾಡಿ ಮಾತನಾಡಿ, ಈಗಾಗಲೇ ಹಲವಾರು ರಸ್ತೆ ಕಾಮಗಾರಿಗಳ ಯೋಜನೆಗಳನ್ನು ಅಳವಡಿಸಿಕೊಂಡಿದ್ದು , ರಬಕವಿ–ಬನಹಟ್ಟಿ ನಗರಸಭೆ ಅಧೀನದಲ್ಲಿ ಬೀಳುತ್ತಿರುವ ಮಳೆಯಿಂದಾಗಿ ಹಾಗು ಯುಜಿಡಿ ಕಾಮಗಾರಿಯಿಂದ ಹಾಳಾಗಿರುವ ರಸ್ತೆಗಳನ್ನು ದುರಸ್ಥಿ ಹಾಗು ಹೊಸ ರಸ್ತೆಗಳಿಗೆ ಎಲ್ಲ ಸದಸ್ಯರ ವಿಶ್ವಾಸದಿಂದ ಕಾಮಗಾರಿ ನಡೆಸಲಾಗುವುದೆಂದರು.

ಈ ಸಂದರ್ಭದಲ್ಲಿ ಸಿದ್ಧನಗೌಡ ಪಾಟೀಲ, ಪ್ರಭಾಕರ ಮೊಳೇದ, ಶ್ರೀಶೈಲ ಬೀಳಗಿ, ಸಂಜಯ ತೆಗ್ಗಿ, ಗೌರಿ ಮಿಳ್ಳಿ, ಪೌರಾಯುಕ್ತ ಜಗದೀಶ ಈಟಿ, ಗೋವಿಂದ ಡಾಗಾ, ನಾರಾಯಣ ಮಾಲಪಾಣಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಕೃಷ್ಣಾ ನದಿಯಲ್ಲಿ ಹೆಚ್ಚಳಗೊಂಡ ನೀರು ತಮದಡ್ಡಿ ಗ್ರಾಮದಲ್ಲಿ ಮತ್ತೆ ಶುರುವಾದ ಆತಂಕ



**ತೇರದಾಳ :** ಜಿಲ್ಲೆಯ ಜೀವನಾಡಿ ಕೃಷ್ಣಾ ನದಿಯಲ್ಲಿ ಒಳ ಹರಿವು ನೀರಿನ ಮಟ್ಟ ಹೆಚ್ಚಳವಾಗಿದ್ದು, ನದಿ ತೀರದ ತಮದಡ್ಡಿ ಗ್ರಾಮಸ್ಥರಲ್ಲಿ ಮತ್ತೆ ಪ್ರವಾಹದ ಆತಂಕ ಶುರುವಾಗಿದೆ.

ಬುಧವಾರ ಕೃಷ್ಣಾ ನದಿಗೆ 93ಸಾವಿರ ಕ್ಯೂಸಕ್ಸ್‌ಗೂ ಅಧಿಕ ಹರಿದು ಬರುತ್ತಿದ್ದರೆ 92ಸಾವಿರ ಕ್ಯೂಸಕ್ಸ್‌ಗೂ ಅಧಿಕನೀರನ್ನುಹೊರಬಿಡಲಾಗುತ್ತಿದೆ.ಮಂಗಳವಾರ ರಾತ್ರಿಯಿಂದ ಬುಧವಾರ ಮದ್ಯಾಹ್ನ ಎರಡು ಗಂಟೆ ವರೆಗೆ ತಮದಡ್ಡಿ ಗ್ರಾಮದಲ್ಲಿ ಒಂದುವರೆ ಅಡಿಯಷ್ಟು ನೀರು ಹೆಚ್ಚಳವಾಗಿರುವುದು ಕಂಡು ಬಂದಿತು. ಅಥಣಿ ತಾಲೂಕಿಗೆ ಹೋಗುವ ಬೋಟ್ ಸಂಚಾರ ಇನ್ನೂ ಪ್ರಾರಂಭ ಇದ್ದು, ದೋಣಿ ಪ್ರಯಾಣಿಕರು ಎಂದಿನಂತೆ ಹೋಗುವುದು ಬರುವುದು ಸಾಮಾನ್ಯವಾಗಿತ್ತು. ಈಗಷ್ಟೇ ಪ್ರವಾಹದಿಂದಾದ ಗಲೀಜು ಸ್ವಚ್ಛಗೊಳಿಸಿ ಮನೆ ಸೇರಿದ್ದೇವೆ. ಈಗ ನದಿಯಲ್ಲಿ ನೀರು ಮತ್ತೆ ಹೆಚ್ಚಳವಾಗುತ್ತಿರುವುದು ಮತ್ತೆ ಆತಂಕ ಮೂಡಿಸಿದೆ ಎಂದು ಗ್ರಾಮಸ್ಥರು ತಮ್ಮ ಅಳಲು ತೋಡಿಕೊಂಡಿದ್ದಾರೆ.

## ರಾಮಪ್ಪ ಜಿ. ತುಕ್ಕಪ್ಪನವರ ನಿಧನ



**ಜಮಖಂಡಿ :** ಇಲ್ಲಿಯ ಹಿರಿಯ ನ್ಯಾಯವಾದಿಯಾಗಿದ್ದ ರಾಮಪ್ಪ ಜಿ. ತುಕ್ಕಪ್ಪನವರ ಆಗಸ್ಟ್ 28 ರಂದು ನಿಧನರಾದರು. ಮೃತರ ಅಂತ್ಯಕ್ರಿಯೆಯು ತಾಲೂಕಿನ ಮರೆಗುದ್ದಿ ಗ್ರಾಮದ ಅವರ ತೋಟದಲ್ಲಿ ರಾತ್ರಿ ನಡೆಯಿತು.

## ಸವಿತಾ ಬೀಸನಕೊಪ್ಪ ನಿಧನ



**ಮುಧೋಳ :** ತಾಲೂಕಿನ ಮುಗಳಖೋಡ ಗ್ರಾಮದ ಶ್ರೀಮತಿ ಸವಿತಾ ರಮೇಶ ಬೀಸನಕೊಪ್ಪ ಆಗಸ್ಟ್ 26 ರಂದು ತಮ್ಮ 21 ನೆಯ ವಯಸ್ಸಿನಲ್ಲಿ ನಿಧನರಾದರು. ಮೃತರು ತಮ್ಮ ಹಿಂದೆ ಪತಿ , ಅತ್ತೆ , ಮಾವ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಗ್ರಾಮದ ಸಮಸ್ತ ಹಿರಿಯರು ಹಾಗೂ ಸಿದ್ಧಾರೂಢರ ಭಕ್ತ ಸಮೂಹ ಶೋಕ ವ್ಯಕ್ತಪಡಿಸಿದ್ದಾರೆ.

## ಬ್ರಹ್ಮ ಶ್ರೀ ನಾರಾಯಣ ಗುರೂಜೀ ಅವರಿಗೆ ಸಂಸದರಿಂದ ಪುಷ್ಪಾರ್ಚನೆ



**ರಾಯಚೂರ :** ಎಚ್‌ಎಸ್‌ಆರ್ ಬಡಾವಣೆಯಲ್ಲಿ ಜಿಲ್ಲಾಡಳಿತ, ನಗರಸಭೆ ಹಾಗೂ ಆರ್ಯ ಈಡಿಗ ಸಮಾಜದ ವತಿಯಿಂದ ಆಯೋಜಿಸಿದ್ದ ಬ್ರಹ್ಮ ಶ್ರೀ ನಾರಾಯಣ ಗುರುಗಳ ಜಯಂತಿಯಲ್ಲಿ ಸಂಸದ ಜಿ ಕುಮಾರ ನಾಯಕ ರವರು ಹಾಗೂ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್‌ಎಸ್ ಬೋಸರಾಜು ಅವರು ಭಾಗವಹಿಸಿ ಶ್ರೀ ನಾರಾಯಣ ಗುರುಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ನಂತರ ಭಾವಚಿತ್ರ ಮೆರವಣಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಈ ಸಂದರ್ಭದಲ್ಲಿ ಶಾಂತಮಲ್ಲ ಶಿವಾಚಾರ್ಯರು ಅಪರ ಜಿಲ್ಲಾಧಿಕಾರಿ ಸಿಎಸ್ ಭಜಂತ್ರಿ, ತಹಶೀಲ್ದಾರರಾದ ಸುರೇಶ್ ವರ್ಮಾ, ಜಯಣ್ಣ, ರುದ್ರಪ್ಪ ಅಂಗಡಿ, ಬಸವರಾಜ ಪಾಟೀಲ್, ಶಿವಮೂರ್ತಿ, ಸೇರಿ ಅನೇಕರಿದ್ದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State